ಅಪರಂಜಿ

ಫೆಬ್ರವರಿ
1993
ತಿಳಿನಗೆಯ ಕಾರಂಜಿ



- ಪ್ರಕಾಶ್
- ಸಿ. ಆರ್. ಸತ್ಯ
- ಬೀರಣ್ಣ
- ಶಿವು
- ಶೀನೂ
- ರಾಮಿ
- ಶಾಂತ ರಘೂ

ಬಿಡಿ ಪ್ರತಿ : 2 ರೂ. 50 ಪೈ.



ಸಂಪುಟ ೧೦ ಫೆಬ್ರವರಿ ೧೯೯೩ ಸಂಚಿಕೆ ೫

ಎನ್ನಾರೈ ಮೊಮ್ಮಗಳು ಶೈಲಜಾ ಕ್ರಿಸ್‌ಮಸ್ ರಜೆಗೆ ಅಜ್ಜ ಅಜ್ಜಿಯರನ್ನು ನೋಡಲು ಬೆಂಗಳೂರಿಗೆ ಬಂದಿದ್ದಳು. ಭಾನುವಾರ ಬೆಳಗ್ಗೆ ಪೇಪರೋದುತ್ತಾ ಕುಳಿತಿದ್ದ ಅಜ್ಜ, ಅಜ್ಜಿಯನ್ನು ಕುರಿತು,

"ಚಿನ್ನಾ ಒಂದು ಲೋಟ ಕಾಫಿ ತರುತ್ಯಾಗುತ್ತೇ" ಅಂತ ಮಧುರ ದನಿಯಲ್ಲಿ ಕೇಳಿದ. ಅಜ್ಜಿ ಕಾಫಿ ತರಲು ಒಳಕ್ಕೆ ಹೋದನಂತರ ಶೈಲಜ, "ಅಜ್ಜ, ಹೌ ರೊಮಂಟಿಕ್! ಈಗಲೂಕೂಡ ಅಜ್ಜೀನ ಚಿನ್ನಾ ಅಂತ ಕರೀತೀಯಲ್ಲ!" ಅಂತ ಉದ್ಗರಿಸಿದಳು.

ಅಜ್ಜ ಮೆಲ್ಲಗೆ ಆಚೀಚೆ ನೋಡಿ ಪಿಸುಗುಟ್ಟಿದ

"ಹಾಗೇನಿಲ್ಲ ಮಗೂ! ಯಾಕೋ ಈಚೀಚೆಗೆ ಅವಳ ಹೆಸರೇ ಮರೆತು ಹೋಗ್ತಾ ಇದೆ. ಅದು ಅವಳಿಗ್ಯಾಕೆ ಗೊತ್ತಾಗ್ಬೇಕು!"

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ
2 ರೂ. 50 ಪೈ.
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ
250 ರೂ.

ವಿಳಾಸ
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8ರಿಂದ
10 ಗಂಟೆಯವರೆಗೆ

ಈ ಸಂಚಿಕೆಯಲ್ಲಿ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೦ ಫೆಬ್ರವರಿ ೧೯೯೩ ಸಂಚಿಕೆ ೫

ಬ್ರಹ್ಮಪುರದಲ್ಲಿ ಹೃದಯಕಮಲವೆಂಬ ಚಿಕ್ಕಮನೆ ಇದೆ
ಅದರಲ್ಲಿ ದಹರಾಕಾಶವಿದೆ. ಅದನ್ನು ಹುಡುಕಿ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು.
— ಛಾಂದೋಗ್ಯ

ಈ ವಾಕ್ಯದಲ್ಲಿ ಹೇಳಿರುವ ಹೃದಯಾಕಾಶವು ಭೌತಿಕ ಆಕಾಶ ಅಥವಾ ಜೀವನಾಗಿರದೇಕು ಎನ್ನುವುದು ವೇದಾಂತಿಗಳಲ್ಲದವರ ಮತ. ಇದು ಬ್ರಹ್ಮವೇ ಎಂಬುದು ವೇದಾಂತದ ಮತ, ಇದಕ್ಕನುಸಾರವಾಗಿಯೇ 'ಅರ್ಜುನ, ಪರಮಾತ್ಮನು ಎಲ್ಲ ಪ್ರಾಣಿಗಳ ಹೃದಯದಲ್ಲಿರುತ್ತಾನೆ' ಎಂದು ಶ್ರೀ ಕೃಷ್ಣನು ಹೇಳಿರುವುದು. ಪರಮಾತ್ಮನು ನನ್ನ ಹೃದಯದಲ್ಲೇ ಇದ್ದಾನೆ ಎಂದು ಎಲ್ಲರೂ ಹೇಳುತ್ತಿರುವುದು.

ಆದರೆ ಆ ಬ್ರಹ್ಮನನ್ನು ಹುಡುಕ ಬೇಕು. ಅರಿತು ಸಾಕ್ಷಾತ್ಕರಿಸಿ ಕೊಳ್ಳಬೇಕು ಎಂಬುದನ್ನು ಸಾಮಾನ್ಯವಾಗಿ ಎಲ್ಲರೂ ಮರೆಯುತ್ತಾರೆ.

ಹೃದಯದಲ್ಲೇ ಪರಮಾತ್ಮನಿರುವನೆಂದು ಹೇಳಿದೆಯಲ್ಲ. ಅಂದಮೇಲೆ ಗುಡಿಯೇಕೆ ಇತ್ಯಾದಿಯಾಗಿ ಹೇಳುತ್ತಾರೆ. ಎಲ್ಲವೂ ಬ್ರಹ್ಮವೆಂದು ಹೇಳಿದೆಯಲ್ಲ ಅಂದಮೇಲೆ ನಾವು ಏನೂ ಮಾಡಬೇಕಾಗಿಲ್ಲ ಎನ್ನುತ್ತಾರೆ.

ಆದರೆ ಆದರ ಜಿಜ್ಞಾಸೆ ಮಾಡಲು ಹೋಗುವುದಿಲ್ಲ. ಹೊರಗಿನ ಗುಡಿಯನ್ನು ಕಲ್ಲಿನಿಂದ ಕಟ್ಟಬಾರದೆನ್ನುವವನು ಹೃದಯ ಪರಿಶೋಧನೆ ಮಾಡಿಕೊಂಡಾನೆ? ಅಟ್ಟಕ್ಕೆ ಹಾರಲಾಗದಿದ್ದವರು ಬೆಟ್ಟದ ತುದಿಗೆ ಹಾರಿಯಾರೆ?

ಎಲ್ಲವೂ ಬ್ರಹ್ಮವೆಂದ ನೀವು ಸಹನೆಯ ಪ್ರತಿರೂಪವಾಗಿರಬೇಕು. ನಾವು? ನಾವೇನೂ ಸಹನಗೆ ಪ್ರಸಿದ್ಧರಾಗಿಲ್ಲವಲ್ಲ. ಪ್ರಸಾರಕ್ಕೆ ಬದ್ಧರಾಗಿದ್ದೇವೆ. ನೀವು ಸುಮ್ಮನಿರಿ ಎನ್ನುವುದೂ ಒಂದು ವಾದ.

ಬ್ರಹ್ಮಜ್ಞಾನಿಗೆ ಅದು ಸಮ್ಮತ. ನೀನು ದೇಹವನ್ನು ಏನಾದರೂ ಮಾಡೀಯು: (ಆತ್ಮ) ನನ್ನನ್ನಲ್ಲ ಎನ್ನುತ್ತಾನೆ,

ಆದರೆ ಎಲ್ಲರೂ ಬ್ರಹ್ಮಜ್ಞಾನಿಗಳಲ್ಲ. ಲೆಕ್ಕಾಚಾರ ಹಾಕಿದರೆ ಕೋಟಿಗೊಬ್ಬನು ಅಂತಹವನಿರುತ್ತಾನೆ. ಹಾಗೆಂದರೆ ನಮ್ಮಲ್ಲಿ ಎಂಬತ್ತು ಜನರಿದ್ದಾರೆ. ವ್ಯವಹಾರದಲ್ಲಿ ರಾಜಕಾರಣದಲ್ಲಿ ಆದಕ್ಕೆ ಅವಕಾಶವಿಲ್ಲ. ಬಹುಮತಕ್ಕೆ ಮನ್ನಣೆ ಕೊಡುವುದು ಪ್ರಜಾಪ್ರಭುತ್ವಕ್ಕೆ ಭೂಷಣ.



ಪ್ರಕಾಶ್

ಕೊನೆಗೊಮ್ಮೆ ಭಾರತದತ್ತ ನೋಡುತ್ತ, ಬಾಪು,

'ಹೇ ರಾಮ್!' ಅಂತ ನಿಟ್ಟುಸಿರು ಬಿಟ್ಟರಂತೆ!

*   *   *

ವೈದ್ಯರ ಮನೆಗೆ ಧಾಳಿ, ನಗ, ನಾಣ್ಯ ಲೂಟಿ

—ಸುದ್ದಿ

ಪಾಪ, ಅವರ ಮನೇಲಿ ಎಲ್ಲಿ ನಗ ಬಂತು?

*   *   *

'ನಾನು ಸುಳ್ಳು ಹೇಳೊಲ್ಲ, ಆ ಅಭ್ಯಾಸ ನನಗಿಲ್ಲ'

— ಒಬ್ಬ ಸಚಿವರ ಹೇಳಿಕೆ

ನಿಜವಾದ ಮಾತು!!

*   *   *

ಕ್ರಿಕೆಟ್ ಬ್ಯಾಟಿನಲ್ಲಿ ವಿದೇಶಿ ಕರೆನ್ಸಿ; ಬಂಧನ

— ಕಸ್ಟಂಸ್ ಸುದ್ದಿ

ವಾಪಸ್ ಬರುವ ಭಾರತದ ಟೀಂ ಜತೆ ಬರಲಿಲ್ಲ, ಬೆಪ್ಪ!!

*   *   *

ತಮಿಳುನಾಡಿನಲ್ಲಿ ಕನ್ನಡ ಶಿಲಾ ಶಾಸನ

— ಸುದ್ದಿ

ಅದು ಕನ್ನಡ ಅಂತ ಅವರಿಗೆ ಗೊತ್ತಾದ್ದು ಆಶ್ಚರ್ಯ !

*   *   *

ತಲೆನೋವು ಮಾತ್ರೆ ನುಂಗಿದರೆ ನೋವು ಜಾಸ್ತಿ ಯಾಗುತ್ತೆ

—ಅಮೆರಿಕನ್ ವಿಜ್ಞಾನಿ

ಅಯ್ಯೋ. ನಾವು ಭಾರತದ ಔಷಧಿಗಳನ್ನ ಬೈತಾ ಇದ್ವಿ ಪಾಪ !

*   *   *

ಬಿಗಿ ಕಾವಲಿನಲ್ಲಿ ರಾಮು ದರ್ಶನ

—ಶೀರ್ಷಿಕೆ

'ಕಾವಲು' ಯಾರಿಗೆ ? ಜನರಿಗೋ, ರಾಮುನಿಗೋ, ಸೆಕ್ಯುಲರಿಸಂಗೋ ?

*   *   *

ಇದೊಂದು ಅಡುಗೆ ಎಣ್ಣೆಯ ಜಾಹೀರಾತು

— ಜಾಹೀರಾತು

ಹೀಗೆ ಮೇಲೆ ಬರೆದರೆ ನಮಗೆ ವಾಸಿ !
ಪೂರ ಓದೋದು ತಪ್ಪುತ್ತೆ !

*   *   *

'ನ್ಯಾಷನಲ್ ಸರ್ಕಸ್'

— ಶೀರ್ಷಿಕೆ

ದೆಹಲಿಯು ರಾಜ್ಯಭಾರ ಅಲ್ಲ, ಸರ್ಕಸ್ ಜಾಹೀರಾತು ಅಷ್ಟೆ !

*   *   *

ಶಾಂತಿಯು ಪ್ರವಾಹ, ಹಿಂಸೆ, ಕ್ರೌರ್ಯಗಳ
ದಳ್ಳುರಿಯನ್ನು ಜಗತ್ತಿನಾದ್ಯಂತ ನಂದಿಸಲಿ ಅಂತ
ಅಪರಂಜಿ ತಲೆಬಾಗಿ ಬೇಡುತ್ತಾಳೆ !

ಹಾಸ್ಯ ಸಂಘ [ರಿಜಿಸ್ಟರ್ಡ್]

ಸೀ. ಆರ್. ಶರ್ಮ

ನಮ್ಮ ಬಡಾವಣೆಯುದೇ ಆದ ಮೇಲ್ಮಂಡ ಹಾಸ್ಯ ಸಂಘದ ಪ್ರೆಸಿಡೆಂಟರನ್ನು ಇತ್ತೀಚೆಗೆ ಸಾವಕಾಶವಾಗಿ ಭೇಟಿ ಮಾಡಿದಾಗ ನಡೆದ ಮಾತು-ಕತೆಯು ಸಂಕ್ಷಿಪ್ತ ವರದಿ ಇದು. ನಮ್ಮ ದೇಶದಲ್ಲಿ ಹಾಸ್ಯ ಅನ್ನೋದು ಇದೆಯೋ ? ಇದ್ದರೆ ಅದರ ಸ್ಥಾನ-ಮಾನವೇನು ಅಂತ ಓದುಗರಿಗೆ ಒಂದು ಅಭಿಪ್ರಾಯ ಸಿಗುತ್ತದೆ ಅನ್ನೋದೇ ನನ್ನ ಆಶೆ,

ನಾನು: ನಮಸ್ಕಾರ ಪ್ರೆಸಿಡೆಂಟರೆ, ಮೊಟ್ಟ ಮೊದಲನೆಯದಾಗಿ ನನ್ನ ಸಂದೇಹ ತೀರಿಸಿಕೊಳ್ತೀನಿ, ಈ ಹಾಸ್ಯ ಎಂದರೆ ಏನೂ ಅಂತ ?

ಪ್ರೆಸಿ ಅದು ನನಗೂ ಗೊತ್ತಿಲ್ಲ ನೋಡಿ. ನನಗೇನು, ಈ ಭರತ ಖಂಡದಲ್ಲೇ ಯಾರಿಗೂ ಅಷ್ಟಾಗಿ ತಿಳಿದಿಲ್ಲ ಅಂತ ನಂಬಿದ್ದೀನಿ. ಅನೇಕ ಶತಮಾನಗಳ ಹಿಂದೆ ನಮ್ಮ ದೇಶದಲ್ಲಿ ಹಾಸ್ಯ ಅಂತ ಇತ್ತಂತೆ. ಆದರೆ ಆ ಅಲೆಕ್ಸಾಂಡರ್ ದಂಡೆ ಎತ್ತಿ ಬಂದು ಭಾರತದಿಂದ ಏನೇನೋ ತೊಗೊಂಡು ಹೊರಟು-ಹೋದನಲ್ಲಾ, ಅವುಗಳಲ್ಲಿ ಈ ಹಾಸ್ಯವೂ ಒಂದು ಅಂತ ಚಾರಿತ್ರಿಕ ಮಾಹಿತಿಗಳೇನೋ ಇವೆ.

ನಾನು ಇತ್ತೀಚಿಗೆ ಇದರ ಬಗ್ಗೆ ಏನೂ ಕೆಲಸ ನಡೆದಿಲ್ಲವೆ ?

ಪ್ರೆಸಿ ನಡೆದಿದೆ, ನಡೆದಿದೆ, ಬಹುಶಃ ನಮ್ಮ ಕನ್ನಡ ನಿಘಂಟಿನ 1995ರ ಎಡಿಶನ್‌ನಲ್ಲಿ ಈ ಪದವನ್ನು ಸೇರಿಸೋ ಸಂಭವ ಇದೆ. ಅನೇಕ ಸಾಹಿತಿ-ಗಳು ಇದರ ಅರ್ಥವೇನು ಅಂತ ಬಹಳ ಭರದಿಂದ ಸಂಶೋಧನೆ-ಯನ್ನೇನೋ ನಡೆಸ್ತಿದ್ದಾರೆ. ಒಬ್ಬ ವಿದ್ವಾಂಸರ ಪ್ರಕಾರ ಹಾಸ್ಯ ನಗಿಸುತ್ತೆ ಅಂತ ಒಂದು ವಾದ. ಈ ಕಾರಣದಿಂದಲೇ ನಾವು ಹಾಸ್ಯ ಸಂಘವನ್ನು ಸ್ಥಾಪಿಸಿದ್ದೀವಿ,

ನಾನು ಈ ಸಂಘದ ಉದ್ದೇಶವೇನು ರಾಯರೆ ?

ಪ್ರೆಸಿ : ಜನರನ್ನ ನಗಸೋದರೀ, ಅಷ್ಟೆ.

ನಾನು : ಅದ್ಹೇಗೆ ಈ ಕೆಲಸ ನಡೆಸ್ತೀರಿ ?

ಪ್ರೆಸಿ : ಸುಲಭಾರೀ. ಮಾತಾಡೋಕ್ಕೆ ಒಬ್ಬರನ್ನು ಕರ್ಕೊಂಡು ಬರ್ತೀವಿ, ಅವರು ಮಾತಾಡ್ವಾಗ ನಗೋಕ್ಕೆ ಸಭಾಂಗಣದಲ್ಲಿ ಸ್ವಲ್ಪ ಜನಗಳನ್ನ ಕೂರಿಸ್ತೀವಿ. ಮುಗೀತು ಕೆಲಸ.

ನಾನು : ನಿಜವಾಗ್ಲೂ ಅಷ್ಟು ಸುಲಭವೆ ?

ಪ್ರೆಸಿ : ಸ್ವಲ್ಪ ಕಷ್ಟ ಇದೆ ಒಪ್ಕೋತೀನಿ. ಭಾಷಣಕಾರರನ್ನ ಹೇಗೋ ಹಿಡಿತೀವಿ. ಆದರೆ ಆಡಿಯನ್ಸ್‌ನ ಹಿಡ್ಯೋದು ಕಷ್ಟ. ಒಂದೊಂದು ಸಲ ನಮ್ಮ ಬಡಾವಣೆಯ ಮಾರ್ಕೆಟ್ ಹತ್ತಿರ ಇರೋವರನ್ನ ಹಾಗೇ ಎತ್ಕೊಂಡು ಬಂದು ಕುರ್ಚೀಲಿ ಕೂರಿಸ್ತೀವಿ, ಆದರೂ ನಮ್ಮ ಕಾರ್ಯಕಾರಿ ಸಮಿತಿ- ಯವರಿಗೆ ಬಹಳ ವಯಸ್ಸಾಗಿರೋದರಿಂದ ಇದು ಅಷ್ಟು ಸುಲಭದ ಕಾರ್ಯವೇನೂ ಅಲ್ಲ.

ನಾನು : ಒಂದೊಂದು ಸಲ ಭಾಷಣ ಮಾಡೋರು ಹಾಸ್ಯ ಗೀಸ್ಯ ಅಂತ ಮಾತಾಡ್ವಾಗ, ಯಾರು ನಗದೆ ಇದ್ದರೆ ಏನು ಮಾಡ್ತೀರಿ ?

ಪ್ರೆಸಿ : ಒಳ್ಳೆ ಪ್ರಶ್ನೆ. ಇದಕ್ಕೆ ಒಂದು ಆಧುನಿಕ ವಿಜ್ಞಾನದ ಉಪಕರಣವೂ ಇದೆ, ಜಪನೀಸ್ ಬ್ರಾಂಡು. ಇದನ್ನು ಕುರ್ಚಿಕೆ ಸಿಕ್ಕಿಸಿದರೆ ಕೂತಿರೋರ ಸೊಂಟಕ್ಕೆ ಕಚ್ಚಂಕುಳಿ ಕೊಡುತ್ತೆ, ಆದರೆ ಆಟೋಮ್ಯಾಟಿಕ್ ಅಲ್ಲ' ನಮ್ಮ ಸೆಕ್ರಟರಿ ಜನರ ಮಧ್ಯೆ ಕೂತು ತನ್ನ ಕೈನಲ್ಲಿ ಎಲೆಕ್ಟ್ರಿಕ್ ಸ್ವಿಚ್ ಇಟ್ಕೊಂಡಿ- ರ್ತಾರೆ, ಭಾಷಣ ಮಾಡ್ತಿರೋರು ಜೋಕ್ ಕಟ್ ಮಾಡಿದ ತಕ್ಷಣ ಬಟನ್ ಒತ್ತುತ್ತಾರೆ, ಆಗ ಎಲ್ಲಾ ನಗ್ತಾರೆ,

ನಾನು : ಇವೆಲ್ಲಾ ಬಹಳ ದುಬಾರಿಯಲ್ಲವೇ ?

ಪ್ರೆಸಿ : ನಿಜ, ನಿಜ, ಅದೂ ಅಲ್ಲದೆ ಕರೆಂಟ್ ಇಲ್ಲದಿದ್ದರೆ ಏನೂ ಪ್ರಯೋಜನ ಇಲ್ಲ. ಇದಕ್ಕೇ ಎಷೋ ಸಲ ಸಭಾಂಗಣದಲ್ಲಿ ನಾವು ನಾವೇ ಇನ್ನೊಬ್ಬರ ಸೊಂಟಿಕ್ಕೆ ಕಚ್ಚಂಕುಳಿ ಕೊಡ್ತೀವಿ, ಆದರೆ ಒಂದೊಂದು ಸಲ ನಮ್ಮ ಪಕ್ಕ, ಮುಂದೆ ಕೂತಿರೋರು ಅವರಿವರ ಹೆಂಡ್ತೀರೋ, ಹೆಣ್ಣು ಮಕ್ಕಳೋ ಆಗಿದ್ರೆ ಸ್ವಲ್ಪ ತಾಪತ್ರಯಕ್ಕೆ ಬರುತ್ತೆ.

ನಾನು : ಬೇರೆ ಯಾವ ರೀತಿಯಲ್ಲೂ ನಗಿಸೋಕ್ಕೇ ಆಗಲ್ವೆ ?

ಪ್ರೆಸಿ : ಆಗುತ್ತೆ, ಉದಾಹರಣೆಗೆ ಸಭಾಂಗಣಕ್ಕೆ ಲಾಫಿಂಗ್ ಗ್ಯಾಸ್ ಬಿಡೋದೂ ನಾವು ಟ್ರೈ ಮಾಡಿದೀವಿ. ಆದರೆ ಇಲ್ಲಿ ತಾಂತ್ರಿಕ ಕಷ್ಟಗಳು ಅನೇಕ. ಭಾಷಣಕಾರರಿಗೆ ಅನುಮಾನ ಬರದ ಹಾಗೆ ಸಭಿಕರ ಕಡೇಗೇ ಗ್ಯಾಸ್ ಬಿಡಬೇಕು. ಡೋಸೇಜ್ ಸರಿಯಾಗಿ ಅಡ್‌ಜಸ್ಟ್ ಮಾಡ್ಬೇಕು. ಸ್ವಲ್ಪ ಜಾಸ್ತಿ-ಯಾದರೆ ಜೋಕ್ ಮುಗಿದ ಮೇಲೂ ಜನ ನಗ್ತಾನೇ ಇರ್‍ತಾರೆ, ಭಾಷಣ ಮಾಡುತ್ತಿರುವವರಿಗೆ ಅನುಮಾನ ಬಂದರೆ ಕಷ್ಟ.

ನಾನು : ಇತ್ತೀಚಿಗೆ ಜಪಾನಿನಲ್ಲಿ ....

ಪ್ರೆಸಿ : ಗೊತ್ತೂರೀ, ಗೊತ್ತೂರೀ. ನಮ್ಮ ಮೆಂಬರ್ಸ್‌ನಲ್ಲೇ ಒಬ್ಬರು ಪ್ಲಾಸ್ಟಿಕ್ ಸರ್ಜನ್ ಇದ್ದಾರೆ. ಅವರೂ ಅದೇ ಸಜೆಸ್ಟ್ ಮಾಡಿದರು. ಎಲ್ಲರಿಗೂ ಯಾಕೆ ಮುಖವನ್ನು ಸರ್ಜರಿ ಮಾಡಿ ಪರ್ಮನೆಂಟಾಗಿ ನಗೋ ಹಾಗೆ ಮಾಡ್ಬಾರ್ದು ಅಂತ. ಇದರ ಬಗ್ಗೆ ಬಹಳ ಯೋಚಿಸಿದ್ದೀವಿ. ಆ ತರಹ ಮುಖ ಇಟ್ಕೊಂಡರೆ ನಮ್ಮ ಹಾಸ್ಯ ಸಂಘದ ಕಾರ್ಯ ಕಲಾಪಗಳಗೇನೋ ಸರಿಹೋಗುತ್ತೆ, ಆದರೆ ಆಫೀಸಿಗೆ, ಯಾರದಾದರೋ ಪುಣ್ಯ ತಿಥಿಗಳಿಗೆ ಹೋಗೋವಾಗ ಅಷ್ಟು ಸರಿಹೋಗೋಲ್ಲ ಅಂತ ಐಡಿಯಾ ಡ್ರಾಪ್ ಮಾಡಿದ್ವಿ.

ನಾನು : ನಮ್ಮ ದೇಶದಲ್ಲಿ ಈ ಹಾಸ್ಯ ಅನ್ನೋದು ಖಂಡಿತವಾಗಿ ಬೇರೂರುತ್ತೆ ಅಂತ ನಿಮಗೆ ಭರವಸೆ ಇದೆಯೇ ?

ಪ್ರೆಸಿ : ಖಂಡಿತವಾಗ್ಲೂ. ಒಂದಲ್ಲಾ ಒಂದು ದಿನ ನಮ್ಮ ಭಾರತ ಪ್ರಜಾಸ್ತೋಮ ನಕ್ಕೇ ನಗ್ತಾರೆ ಅಂತ ನನ್ನ ದೃಢ ನಂಬಿಕೆ. ಈ ಉದ್ದೇಶದಿಂದಾಗಿ ಎಷ್ಟೇ ಕಷ್ಟವಾದರೂ ಸರಿ, ನಾವು ಧ್ಯೇಯೋನ್ಮುಖರಾಗಿ ಈ ದಿಕ್ಕಿನಲ್ಲಿ ಕೆಲಸ ಮಾಡಲೇಬೇಕು ಅಂತ ನಿಶ್ಚಯಿಸಿದ್ದೀವಿ.

ನಾನು : ಹಾಗಾದರೆ ಈಗ ಸಧ್ಯಕ್ಕೆ ಬಹು ಮುಖ್ಯವಾದ ಮುಂದಿನ ಕಾರ್ಯ ?

ಪ್ರೆಸಿ : ನಮ್ಮ ಸಂಘದ ಸದಸ್ಯರಾರೂ ಈ ವರ್ಷದ ಚಂದಾ ಕೊಟ್ಟಿಲ್ಲ, ಅದನ್ನು ಗಿಟ್ಟಿಸಿಕೊಳ್ಳೋದು. ಯಾಕ್ರೀ, ಯಾಕ್ರೀ, ನಗೀದ್ತಿರಾ ? ನಗೆಯಾಡಿ, ನಗೆಯಾಡಿ. ನನಗೇನೂ ಕೋಪ ಬರೋಲ್ಲ ! ನಮ್ಮ ಸಂಘದ ಉದ್ದೇಶವೂ ನಗಿಸೋಕ್ಕೇ ಅಲ್ಲವೇನ್ರಿ .... ?

O

ಒಂದಲ್ಲ, ಎರಡು !

ಸೂ. ಸು.

ಎರಡು ಕೋಣೆಗಳ ನೀಂ ಮಾಡು ಮನದಾಲಯದಿ ।
ಹೊರ ಕೋಣೆಯಲಿ ಲೋಗರಾಟಗಳನಾಡು ॥
ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ ।
ವರಯೋಗ ಸೂತ್ರವಿದು ಮಂಕು ತಿಮ್ಮ ॥

ಆಟಗಳನಾಡು ಎಂದಾಗ ನೆನಪಾಗುತ್ತದೆ ಇಂಗ್ಲೆಂಡಿನ ಖ್ಯಾತ ಕ್ರೀಡಾಪಟು ಡೆನಿಸ್ ಕಾಂಪ್ಟನ್ನನ ಹೆಸರು. ಈತ ಇಂಗ್ಲೆಂಡನ್ನು ಕ್ರಿಕೆಟ್ ಮತ್ತು ಕಾಲ್ಚೆಂಡು ಎರಡೂ ಕ್ರೀಡೆಗಳಲ್ಲಿ ಪ್ರತಿನಿಧಿಸಿದ್ದ. ನಮ್ಮ ದೇಶದಲ್ಲಿಯೂ ಹೀಗೇ ಇಂಥದೇ ಎರಡು ಆಟಗಳಲ್ಲಿ ರಾಷ್ಟ್ರವನ್ನು ಪ್ರತಿನಿಧಿಸಿದ ಆಟಗಾರ ಚುನಿ ಗೋಸ್ವಾಮಿ ಎಂದು ನನ್ನ ನೆನಸು.

ಯಾಕೆ ಹೇಳುಕ್ಕೆ ಬಂದೆ ಅಂದರೆ, ಈ ಒಂದಲ್ಲ ಎರಡರ ಮಹಿಮೆಯ ನಮ್ಮ 'ಅಪರಂಜಿ' ಸಂಪಾದಕರು ಗಳಿಸಿರುವ ಹಿನ್ನೆಲೆ ಬಗ್ಗೆ ಚಿಂತಿಸುತ್ತಾ ಹೋದಾಗ ಈ ದ್ವಿತ್ವದ ಸರಣಿಗಳು ಮನಸ್ಸಿನ ಪರದೆಯ ಮೇಲೆ ಹಾದು ಹೋದವು.

'ಅಪರಂಜಿ ಯ ಶಿವಕುಮಾರ್ 1987 ರಲ್ಲಿ 'ಯಂತ್ರಕಥೆ' ಬರೆದು ಆ ವರ್ಷದ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ಗಿಟ್ಟಿಸಿದಾಗ ಆ ಪುಸ್ತಕ ಕುರಿತು ಕನ್ನಡ ವಿಜ್ಞಾನ ಪರಿಷತ್ತು,

'ಪ್ರಾಯಶಃ ಈ ಬಗೆಯ ಪುಸ್ತಕ ಕನ್ನಡದಲ್ಲಿ ಇದೇ ಮೊದಲಿನದಾಗಿರಬಹು ದೆಂಬ ಅನಿಸಿಕೆ ನಮ್ಮದು' ಎಂದ ಅಭಿಪ್ರಾಯದ ಹಿಂದಿನ ಕೆಚ್ಚನ್ನು ಮೆಚ್ಚು ವಂತಾಯಿತು.

ಆಯಿತು, ವರ್ಷಗಳುರುಳಿತು. ಶ್ರೀ ಶಿವಕುಮಾರ್, ವಿಜ್ಞಾನ ವಿಷಯ ಗಳನ್ನು ಹಾಸ್ಯದ ಒರೆಗಲ್ಲಿನಲ್ಲಿ ತೀಡಿ, ವಿಜ್ಞಾನದ ಭಾಷೆಯನ್ನು ಅನುಕರಿಸಿ ಬರೆ ದರೆ ಹೇಗೆ ಎಂಬ ಕುತೂಹಲವನ್ನು ತಣಿಸುವ ಪ್ರಯತ್ನದಲ್ಲಿ 'ಅಪರಂಜಿ' ಗೆಂದು ಬರೆದ ಲೇಖನಗಳು, ಹಲವು ಅಣುಕು ಕವನಗಳೊಂದಿಗೆ ಬೆಸೆದು 'ಮಧುಚಂದ್ರ' ವಾಗಿ ಹೊರಬಂದವು, ಮೊನ್ನೆ ಈ ಪುಸ್ತಕಕ್ಕೆ 1991 ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು, ವಿನೋದ ಸಾಹಿತ್ಯದ ಉತ್ತಮ ಕಾಣಿಕೆ ಎಂದು.

ನಾಲ್ಕು ವರ್ಷಗಳ ಹಿಂದೆ ಬರೆದದ್ದು ವಿಜ್ಞಾನಕ್ಕೆ ಈಗ ಬರೆದದ್ದು ವಿನೋದಕ್ಕೆ,—ಹೀಗೆ "ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ...... ಎನ್ನುವಂತೆ ಸಾಹಿತ್ಯದ ವಿಭಿನ್ನ ಮೇರುಗಳನ್ನು ಮೀರಿ, ವೈವಿಧ್ಯಮಯ ಶೈಲಿ, ವಿಷಯ ಸಂಪತ್ತು, ಹಾಗೂ ವೈಚಾರಿಕ ಅನು ಚಿಂತನೆಯ ಸೊಬಗುಳ್ಳ ಬರಹಗಾರನಿಗೆ ಬಂದ ಪ್ರಶಸ್ತಿಗಳು ಒಂದಲ್ಲ, ಎರಡು !

ಚೆಂಡು ದಾಂಡಿಗರಾಟದಲ್ಲಿ ಹೇಳುವಂತೆ 'ಹ್ಯಾಟ್ರಿಕ್ ಪಡೆಯಿರಿ' ಎನ್ನಲೆ ? ಅಥವಾ ನಾಟಕಾಭಿಮಾನಿ ರಸಿಕರಂತೆ 'ಒನ್ಸ್‌ಮೋರ್' ಎನ್ನಲೆ ?

'ಹೇಗಾದರೂ ಸರಿ ! ಎನ್ನುತ್ತೀರಾ ? !

o

ಕೊರವಂಜಿಯಿಂದ ....



ಪುಟ್ಟೂರಾಯನ ಪಥ್ಯ

ಬೀರಣ್ಣ

ಬ್ರಹ್ಮೇಂದ್ರ ಭವನದ ಮೂರನೆ ಮಹಡಿಯ ವಾತಾವರಣವು ಸ್ವಲ್ಪ ಬಿಗಡಾಯಿಸಿತು. ಸಾಧಾರಣವಾಗಿ ಸೇರುವವರೆಲ್ಲರೂ ಕೇವಲ ಶಾಂತಪ್ರಿಯರಾದರೂ ಭಿನ್ನಾಭಿಪ್ರಾಯಗಳು ಬಂದಾಗ ಮಾತುಗಳ ಬಿಸಿ ಸ್ವಲ್ಪ ಏರುವುದೆಂದೇ ಹೇಳಬೇಕು.

ಭೀಮಣ್ಣನು ಇನ್ನೂ ಬಂದಿರಲಿಲ್ಲ. ಖಾರಾಬೂಂದಿಯ ಕುಳ್ಳಪ್ಪನಿಗೂ ಮೂರನೆಯ ಮಹಡಿಯವರೆಗೂ ತಪ್ಪಿ ಬಂದುಬಿಟ್ಟಿದ್ದ ಒಬ್ಬ ಹೊಸಬರಿಗೂ ಆರಂಭವಾಯಿತು ವಾಗ್ಯುದ್ಧ. ಬರೀ ಜಿಲೇಬಿ ಜಾಮೂನುಗಳನ್ನೇ ತರಿಸಿದ್ದ ಹೊಸಬರು ಸುಮ್ಮನಿರಲಾರದೆ ಕುಳ್ಳಪ್ಪನನ್ನು ನೋಡಿ, "ಖಾರ ಮೈಗೆ ಕೆಟ್ಟದ್ದು, ಎಂದರು.

ನಾವೆಲ್ಲ ತಲೆಯೆತ್ತಿ ನೋಡಿದೆವು - ಮಾತನಾಡಿಸಲ್ಪಡದೆ ಮಾತನಾಡುವುದು ನಮ್ಮ ಪದ್ಧತಿಗೇ ವಿರೋಧ. ಆ ಸ್ವಾತಂತ್ರ್ಯವು ಭೀಮಣ್ಣನಿಗೊಬ್ಬನಿಗೇ ಇದ್ದದು ಸ್ವಲ್ಪ ಹೊತ್ತು ಯಾರೂ ಬಾಯಿ ಬಿಡಲಿಲ್ಲ. ಕುಳ್ಳಪ್ಪನು ಬೂಂದಿ ಅಗಿಯುವುದು ಮಾತ್ರ ಕೇಳಿಸುತ್ತಿತ್ತು, ಹೊಸಬರು ಮತ್ತೆ "ಖಾರದಿಂದ ದೇಹಕ್ಕೆ ಆಗುವ ಕೇಡು ಅಷ್ಟಿಷ್ಟಲ್ಲ. ಅಲ್ಲದೇ ಅದು ತಾಮಸಾಹಾರ!"

ಕುಳ್ಳಪ್ಪನು ಅಗಿಯುವುದನ್ನು ನಿಲ್ಲಿಸಿ, "ಜಾಮೂನು. ಜಿಲೇಬಿಗಳೇನು ಸಾತ್ವಿಕಾಹಾರವೋ ?" ಎಂದನು.

"ಹೌದು. ಅದಕ್ಕೇ ನಾನು ಚಟ್ನಿ ಕೂಡ ತಿನ್ನುವುದಿಲ್ಲವಲ್ಲ!" ಎಂದರು ಹೊಸಬರು,

ಇದು ನಮಗೆಲ್ಲಾ ಸ್ವಲ್ಪ ತಾಕಿತು. ಬ್ರಹ್ಮೇಂದ್ರಭವನದ ಚಟ್ನಿ ಎಂದರೆ ಅದೇ ಒಂದು ವಿಶೇಷ. ಏನು ತಿನ್ನದಿದ್ದರೂ ನಾವೆಲ್ಲ ಸ್ವಲ್ಪ ಚಟ್ನಿಯನ್ನಾದರೂ ನಾಲಿಗೆಗೆ ಸವರಿಕೊಂಡು ಚಪ್ಪರಿಸುವುದು ಅಭ್ಯಾಸ.

"ನೀವು ತಿನ್ನದಿದ್ದರೆ, ಮಣಗಟ್ಲೆ ಚಟ್ನಿ ತಿಂದಿರುವ, ಈಗ ತಿನ್ನುತ್ತಿರುವ. ಮತ್ತು ಮುಂದೆಯೂ ಖಂಡಿತವಾಗಿಯೂ ತಿನ್ನುವ ನಾವೆಲ್ಲ ಏನಾಗಿದ್ದೇವೆ? ನಾವೆಲ್ಲಾ ಅಸಾತ್ವಿಕರೇನು!" ಎಂದು ಒಬ್ಬರು ಅಂದರು.

"ಚಟ್ನಿ ತಿನ್ನದಮೇಲೆ ಏಕೆ ಬದುಕಿರಬೇಕೋ ನಾನು ಕಾಣೆ" ಎಂದು ಮತ್ತೊಬ್ಬರಂದರು.

"ಅದೂ ಇಡ್ಲಿಯೊಂದಿಗೆ!" ಎಂದು ಇನ್ನೊಬ್ಬರು ಸೇರಿಸಿದರು.

"ನಿಮ್ಮದು ಯಾವ ಊರೋ?" ಎಂದು ಮಗದೊಬ್ಬರು ಕೇಳಿದರು.

ಹೊಸಬರಿಗೆ ತಬ್ಬಿಬ್ಬಾಯಿತು. 'ಅದೆಲ್ಲಾ ಕಟ್ಟಿಕೊಂಡು ನಿಮಗೇನು? ಅಂದರು.

ಸರಿ ಹತ್ತಿಕೊಂಡಿತು ಜಗಳ. ಮಾತುಗಳು ಎಲ್ಲೆಮೀರತೊಡಗಿದವು. ಅಷ್ಟು ಹೊತ್ತಿಗೆ ಸರಿಯಾಗಿ ಕೇಳಬಂತು – "ಎರಡಿಡ್ಲಿ, ಮೂರು ಬೆಣ್ಣೆ, ಚಟ್ನಿ ಬೇರೆ ತಟ್ಟೆಯಲ್ಲಿ...ಬೇಗ!" ಭೀಮಣ್ಣನ ಕೂಗು! ಯಥಾಪ್ರಕಾರ, ಅದರ ಹಿಂದೆ ಭೀಮಣ್ಣ! ಬಂದು ಕುಳಿತವನೇ ಪರಿಸ್ಥಿತಿಯನ್ನು ಒಂದು ಕ್ಷಣದಲ್ಲಿ ಗ್ರಹಿಸಿ ಬಿಟ್ಟನು. ಒಳ್ಳೆ ಜೇನುತುಪ್ಪದಂಥ ಮಾತಿನಲ್ಲಿ ಹೊಸಬರನ್ನು "ಸ್ವಾಮಿ, ದಯವಿಟ್ಟು ಸ್ವಲ್ಪ ನಿದಾನಿಸಿ...ಕೋಪಿಸಬೇಡಿ" ಎಂದನು.

ಹೊಸಬರು "ನೋಡಿ, ಏನೋ ಮೈಗೆ ಖಾರ ಕೆಟ್ಟದ್ದು ಎಂದು ಹೇಳಿದೆ. ಆದಕ್ಕೇ ಎಲ್ಲರೂ ನನ್ನ ಮೇಲೆ ಬೀಳೋಣವೇ! ನಾನು ಹೇಳಿದುದೇನು ತಪ್ಪೆ? ಬೇಕಾದರೆ ಪುಸ್ತಕಗಳಲ್ಲಿ ತೋರಿಸುತ್ತೇನೆ ಖಾರದಿಂದಾಗುವ ಕೇಡು ಎಷ್ಟು ಎಂಬುದನ್ನು" ಎಂದರು.

ಭೀಮಣ್ಣನು ಬೆಣ್ಣೆ ಚಟ್ನಿಯನ್ನು ಹುಷಾರಾಗಿ ಇಡ್ಲಿಗೆ ಸವರಿ. ಕಷ್ಟದಲ್ಲಿ ಸಿಕ್ಕಿರುವ ಯಾವುದಾದರೂ ಒಂದು ವಿಚಿತ್ರ ಹುಳುವನ್ನು ನೋಡುವಂತೆ ಕನಿಕರ ದೃಷ್ಟಿಯಿಂದ ಹೊಸಬರನ್ನು ನೋಡುತ್ತಾ "ಓಹೋ. ಪುಸ್ತಕಗಳಲ್ಲಿ ಓದಿದ್ದೀರೊ?"

"ಹೌದು. ಓದಿದ್ದೇನೆ."

"ಆದರಿಂದಲೇನೋ ನೀವು ಖಾರ ಕೆಟ್ಟದ್ದು ಎಂದು ಹೇಳುವುದು?

"ಅಹುದು.

"ಅಲ್ಲ. ಈ ವಿಚಾರಗಳಿಗಾಗಿ ಪುಸ್ತಕಗಳನ್ನು ನೋಡದೇ ಇರುವುದಕ್ಕೆ ನೀವು ಯಾವಾಗಲಾದರೂ ಪ್ರಯತ್ನಪಟ್ಟಿದ್ದೀರಾ?

ಹೊಸಬರು ಅರ್ಧ ಬಾಯಿ ತೆರೆದು ಹಾಗೆಯೇ ಮಾತಿಲ್ಲದವರಾದರು ಯಾವುದಕ್ಕಾಗಲಿ ಪುಸ್ತಕಗಳನ್ನು ನೋಡುವ ಪದ್ಧತಿ ಅವರದು ಎಂದು ತೋರುತ್ತೆ. ಪುಸ್ತಕಗಳನ್ನು ನೋಡದೆ ಇದ್ದರೆ ಇದು ಕೂಡದು, ಅದು ಕೆಟ್ಟದ್ದು ಎಂಬ ಮಾತೇ ಇಲ್ಲ! ಯಥಾಪ್ರಕಾರ ಒಂದೇ ಒಂದು ಪ್ರಶ್ನೆಯಿಂದ ಭೀಮಣ್ಣನು ವಾಗ್ವಾದದಲ್ಲಿ ಜಯಭೇರಿ ಹೊಡೆದುಬಿಟ್ಟನು !

"ಈ ರೀತಿಯೆಲ್ಲಾ ತಪ್ಪು ಭಾವನೆಗಳನ್ನಿಟ್ಟು ಕೊಳ್ಳ ಬೇಡಿ! ಅದರಿಂದಾಗುವ ಅನಿಷ್ಟವು ಹೇಳುವುದಕ್ಕಾಗುವುದಿಲ್ಲ, ಇದು ನಾನು ಅನುಭವದಿಂದ ಹೇಳುವ ಮಾತು,

"ನಿನ್ನ ಅನುಭವವೆ ? " ಎಂದು ಕೇಳಿದೆ.

"ನನ್ನದಲ್ಲದಿದ್ದರೂ ನಮ್ಮ ಪುಟ್ಟೂರಾಯನದು, (ಸುತ್ತಲೂ ಎಲ್ಲರನ್ನೂ ನೋಡುತ್ತಾ) "ಗೊತ್ತಿರಬಹುದು ನಿಮಗೆಲ್ಲಾ ಪುಟ್ಟೂರಾಯ ......

"ಯಾರದು"? "ಇಲ್ಲವಲ್ಲ."

"ಪುಟ್ಟೂರಾಯ ಕೇವಲ ನನ್ನ ದೊಡ್ಡಪ್ಪನ ಮಗ (ಎಂದು ಶುರು ಮಾಡಿದ ಭೀಮಣ್ಣ)ನಮ್ಮ ಮನೆಯವರೆಲ್ಲರಂತೆಯೇ ಅವನಿಗೂ ಪುಸ್ತಕಗಳನ್ನು ಓದಬೇಕೆಂದರೆ ಅತ್ಯಂತ ಆಸಕ್ತಿ. ಯಾವ ಪುಸ್ತಕ ಸಿಕ್ಕಿದರೂ ಅದನ್ನು ಮೊದಲಿಂದ ಕೊನೆಯವರೆಗೂ ತಿರುವಿಹಾಕದೆ ಬಿಡುತ್ತಿರಲಿಲ್ಲ. ಈ ರೀತಿಯಾಗಿ ಅವನು ಗಳಿಸಿದ್ದ ಜ್ಞಾನ ಇಷ್ಟು ಎಂದು ಅಳೆಯುವುದಕ್ಕೇ ಆಗುತ್ತಿರಲಿಲ್ಲ. ಅರ್ಜೆಂಟೈನಾದಲ್ಲಿ ಆರಡಿ ಮನುಷ್ಯರು ಎಷ್ಟು ಜನ, ಆಂಡಿಸ್ ಪರ್ವತದಲ್ಲಿ ಅಡಗಳಿವೆಯೆ, ಓರಿನೋಕೋ ಎಂಬುದು ಏನು, ಏಕೆ ಮತ್ತು ಎಲ್ಲಿದೆ, ೧೮೨೮ನೇ ಇಸ್ವಿಯಲ್ಲಿ ಇಂಗ್ಲೆಂಡಿನ ಡಾರ್ಬಿ ಜೂಜಿನಲ್ಲಿ ಗೆದ್ದ ಕುದುರೆ ಯಾವುದು ಮತ್ತು ಅದಕ್ಕೆ ಎಷ್ಟು ಮರಿಗಳಾದವು, ಲಿಲಿ ಡ್ಯಾಮಿಟ ಎಂಬ ಸಿನಿಮಾ ನಟಿಯು ಇಲಿ ಕರ್ಷ್‌ಟಗಳನ್ನೇಕೆ ದ್ವೇಷಿಸುವಳು. ಇವೇ ಮುಂತಾದ ಗಹನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಕೊಡುವುದರಲ್ಲಿ ಎತ್ತಿದ ಕೈ. ಗಂಗಾಮೂಲ ಎಲ್ಲಿದೆ ಎಂದು ಯಾರೋ ಮಾತನಾಡುತ್ತಿದ್ದಾಗ, ಪುಟ್ಟುವು ಒಡನೆಯೇ "ಕಿಪ್ಲಿಂಗಿನ (Kipling) ಗಂಗಾದಿನ್ ಎಂಬ ಪದ್ಯದಲ್ಲಿ" ಎಂದು ಹೇಳಿ ಎಲ್ಲರನ್ನೂ ಆಶ್ಚರಿಗೊಳಿಸಿಬಿಟ್ಟಿದ್ದನು !

ಅಥವಾ ಅವನಿಗೆ ಗೊತ್ತಿಲ್ಲದ ವಿಚಾರ ಯಾವುದನ್ನಾದರೂ ಕೇಳಿದರೆ, ಅನ್ನ ನೀರು. ಕಾಫಿ, ಸಹಿತ ಬಿಟ್ಟು ಪುಸ್ತಕಗಳನ್ನೆಲ್ಲಾ ಶೋಧಿಸಿ ಉತ್ತರವನ್ನು ತಂದು ಬಿಡುತ್ತಿದ್ದನು. ಅವನು ಒಂದೇ ಒಂದುಸಲ ಕೇಳಿದ ಪ್ರಶ್ನೆಗೆ ಉತ್ತರ ಕೊಡಲಾರದ

ಹೋದ್ದದು: ಅವನ ತಂಗಿ ತುಂಟು ಹುಡುಗಿ ಎಂದರೆ ಅವಳನ್ನು ಬಿಟ್ಟರೆ ಇಲ್ಲ – ಅವನನ್ನು "ಪುಟ್ಟಣ್ಣ, ಪುಟ್ಟಣ್ಣ ಇರುವಗೆ ಆರು ಕಾಲಾದರೆ ಮಂಚಕ್ಕೆಷ್ಟು?" ಎಂದು ಕೇಳಿದಳು. ಪುಟ್ಟುವು ಅದಕ್ಕೆ ಎಷ್ಟೆಷ್ಟೋ ಯೋಚನೆ ಮಾಡಿದನು. ಗಣಿತದಲ್ಲಿ ತ್ರೈರಾಶಿಯ ಭಾಗವನೆಲ್ಲಾ ನೋಡಿದನು, ಪ್ರಾಣಿಶಾಸ್ತ್ರದ ಪುಸ್ತಕಗಳೆನ್ನೆಲ್ಲಾ ಒಂದು ಹಾಳೆ ಬಿಡದೆ ಓದಿದನು, ಅಲ್ಲಿಯೂ ಬಗೆಹರಿಯಲಿಲ್ಲ. ಕೊನೆಗೆ ಸೋತೆನೆಂದು ಒಪ್ಪಿ ಕೊಳ್ಳಬೇಕಾಯಿತು. ಅವನ ತಂಗಿಯು "ಅಯ್ಯೋ, ಇಷ್ಟೇನೇ ಅಣ್ಣ! ನಾನು ಹೇಳಲೆ? — ಮೂರು ಮತ್ತೊಂದು!" ಎಂದು ಹೇಳಿದಾಗ ಪುಟ್ಟುವು ಪುಸ್ತಕದಲ್ಲಿಲ್ಲವಾದ್ದರಿಂದ ಒಪ್ಪಿ ಕೊಳ್ಳುವುದೇಕಷ್ಟವಾಯಿತು!

ಹೀಗೆ ಪುಸ್ತಕದಲ್ಲಿಲ್ಲದುದನ್ನು ಹೇಗೆ ನಂಬುತ್ತಿರಲಿಲ್ಲವೊ, ಹಾಗೆಯೇ ಅಚ್ಚಿನಲ್ಲಿದ್ದುದೆಲ್ಲಾ ಅವನಿಗೆ ವೇದವಾಕ್ಯ. "ಈ ವರ್ಷ ಒಂದೇ ದಿವಸದಲ್ಲಿ ಹದಿನೆಂಟಂಗುಲ ಮಳೆ ಬಿದ್ದು ಜಲಪ್ರಳಯವಾಗುವುದು" ಎಂದು ಒಬ್ಬ ವಿಜ್ಞಾನ ಶಾಸ್ತ್ರಜ್ಞರು ಹೇಳಿದ್ದಾರೆಂದು ವಾರ ಪತ್ರಿಕೆಯೊಂದರಲ್ಲಿ ಓದಿಬಿಟ್ಟು, ಬೇರೆ ಎತ್ತರವಾದ ಪ್ರದೇಶ ಯಾವುದೂ ಸಿಕ್ಕದೆ, ಮನೇ ಅಂಗಳದಲ್ಲಿ ಬೆಳೆದಿದ್ದ ಅರವತ್ತು ಅಡಿ ಅಡಿಕೆಮರದಮೇಲೆ ಮೂರು ದಿವಸ ಕೂತಿದ್ದಂಥಾ ಆಸಾಮಿ ಅವನು! "ಅಮರ ಕಾಯ ಮೇಷಧ್ವಜ" ಎಂಬ ಸಿದ್ಧೌಷಧಿಯು ಯಾವ ಕೆಲಸವನ್ನಾದರೂ ಮಾಡಬಲ್ಲದು ಎಂಬ ಜಾಹಿರಾತನ್ನೂ, ಪ್ರಸಿದ್ಧ, ರಾಜಾ ಜಮೀನ್ದಾರರು ಕೊಟ್ಟಿದ್ದ ಹೊಗಳಿಕೆಯ ಪತ್ರಗಳನ್ನೂ ನೋಡಿ. ಐವತ್ತು ರೂಪಾಯಿಗೆ ಎರಡು ಸೀಸೆ ತರಿಸಿ ತನ್ನ ಎತ್ತರ (ಅವನು ಇರುವುದು ಆರು ಅಡಿ, ಮೂರೂವರೆ ಅಂಗುಲ, ಎದೆ ಸುತ್ತಳತೆ ಹದಿನೇಳಂಗುಲ!) ಕಡಿಮೆಯಾಗುವುದಕ್ಕೆಂದು ಇಪ್ಪತ್ತೊಂದು ದಿವಸ ಸೇವಿಸಿ ಎತ್ತರದಲ್ಲಿ ಏಳು ಅಂಗುಲ ಕಡಿಮೆಯಾಗಿದ್ದೇನೆಂದು ನಂಬಿ, ಹಾಗಿಲ್ಲವೆಂದು ಹೇಳಿದವರನೆಲ್ಲಾ ಹೊಡೆಯುವುದಕ್ಕೆ ಹೋಗಿ. ಅಳತೆಪಟ್ಟಿಯನ್ನು ತಪ್ಪು ಎಂದು ಹರಿದು ಹಾಕಿ, ಕೊನೆಗೆ ಬಚ್ಚಲುಮನೆ ಬಾಗಿಲಿನಲ್ಲಿ ತಲೆ ತಗ್ಗಿಸದೇ ಹೋದಾಗ ಬುರುಡೆ ಬೋರೆಯಾದದ್ದರಿಂದ ಒಪ್ಪಿಕೊಂಡ ಶೂರ!

ಒಂದುಸಲ, ಅವನು ನಮ್ಮ ದೇಶದ ಸುಪ್ರಸಿದ್ಧ ನಾಯಕರೊಬ್ಬರು ಬರೆದಿರುವ ಆರೋಗ್ಯ ಸೂತ್ರದಲ್ಲಿ ದೇಹಕ್ಕೆ ಖಾರವು ಹಾನಿಕರವಾದದ್ದು ಎಂದು ಓದಿ ಮಾರನೆ ದಿನದಿಂದ ಖಾರ ತಿನ್ನುವುದನ್ನು ಬಿಟ್ಟುಬಿಡಬೇಕೆಂದು ಸಂಕಲ್ಪ ಮಾಡಿಕೊಂಡನು. ನಮ್ಮ ಮನೆಯಲ್ಲಿಯೋ ಖಾರ ಎಂದರೆ ಸ್ವಲ್ಪ ಇಷ್ಟ ಎಂದೇ ಹೇಳಬೇಕು, ನಮ್ಮ ಮುತ್ತಾತಂದಿರು ಮೂರನೆಯ ಮದುವೆಗೆ ಆಂಧ್ರ ದೇಶದ ಹುಡುಗಿಯನ್ನು ತಂದುಕೊಂಡಾಗ, ಆಕೆ ಬಳುವಳಿಯಾಗಿ ಮೂಟೆಗಟ್ಲೆ ಮೆಣಸಿನಕಾಯಿ ತಂದಿದ್ದಳು! ಪುಟ್ಟೂರಾಯನು ಖಾರ ತಿನ್ನುವುದರಲ್ಲಿ, ತಾತಮುತ್ತಾ-

ತಂದಿರನ್ನ ಒಂದು ಕೈ ಮೀರಿಸಿದ್ದನು. ಇಂಥವನು ಪುಸ್ತಕದಲ್ಲಿ ಬರೆದ ಎಂದು ಖಾರವನ್ನೇ ಬಿಟ್ಟು ಬಿಟ್ಟನು ಎಂದರೆ, ಎಷ್ಟರಮಟ್ಟಿನ ಮನಸ್ಥೈರ್ಯ ಎಂಬುದನ್ನು ನೀವೇ ಯೋಚಿಸಬಹುದು. ಮನೆಯವರೆಲ್ಲರಿಗೂ ಆಶ್ಚರ್ಯ, ಒಂದು ದಿವಸ-ವಾಯಿತು, ಎರಡು ದಿವಸವಾಯಿತು, ಮೂರು ದಿವಸಗಳಾದವು. ಆದರೂ ಪುಟ್ಟು ವು ಸಿಹಿಸಾರು, ಖಾರ ಸೋಕದ ಸೊಪ್ಪಿನ ಪಲ್ಯ, ನೀರುಮಜ್ಜಿಗೆ ಇವುಗಳನ್ನು ಬಿಟ್ಟು ಬೇರೆ ಕೇಳಲಿಲ್ಲ ಕೇಳುವುದು ಹಾಗಿರಲಿ. ಮೆಣಸಿನಕಾಯಿ ತೂಗಿದ್ದ ತಕ್ಕಡಿಯಲ್ಲಿ ತೂಗಿಸಿ ತಂದದ್ದೆಂದು ಗೆಣಸನ್ನು ಸಹಾ ಗೊಬ್ಬರಕ್ಕೆ ಒಗೆದುಬಿಟ್ಟ, ಮನುಷ್ಯ !

ಈ ಪಥ್ಯದಿಂದ ಮೊದಲು ಒಳ್ಳೆಯದೇ ಆಯಿತೆಂದು ಹೇಳಬೇಕು. ನಮ್ಮ ಪುಟ್ಟೂರಾಯನಿಗೆ ಕೋಪ ಎಂದರೆ ಮೊದಲಿಂದಲೂ ಮೂಗಿನಮೇಲೆಯೇ. ಖಾರ ಬಿಟ್ಟ ದಿನದಿಂದ ಅವನ ಸ್ವಭಾವದಲ್ಲಿಯೇ ಬದಲಾವಣೆ ಕಂಡುಬಂದಿತು. ಸಿಕ್ಕಿದವರ ಮೇಲೆ ಹಾರಾಡುವುದು ಕಡಿಮೆಯಾಗಿಹೋಯಿತು ಏಕೆ ನಿಂತೇಹೋಯಿತು. ಮೊದಲು, ಮಹಡಿಮೇಲೆ ಆವನ ಕೊರಡಿಗೆ ಯಾರಾದರೂ ಹೋಗಿ ಆವನ ಸಾಮಾನುಗಳನ್ನು ಮುಟ್ಟಿದರೆಂದರೆ ಆಯಿತು ಅವರ ಅವಸ್ಥೆ, ಅವತ್ತೆ ! ಈಗಲಾ-ದರೋ ಕೋಡಿ ಬಾಗಿಲ ಹತ್ತಿರ ಯಾರಾದರೂ ಸುಳಿದರು ಆಂದರೆ ಅವರನ್ನು ಒಳಕ್ಕೆ ಕರೆದು ಏನು ಬೇಕೆಂದು ವಿಚಾರಿಸಿ, ಏನೂ ಬೇಡವೆಂದರೂ ಏನಾದರೂ ಒಂದು ಪದಾರ್ಥವನ್ನು ಕೊಟ್ಟು ಕಳುಹುವನು. ತಂಗಿಗೆ ಪೆಪ್ಪರುಮಿಂಟು, ಚಾಕೋಲೇಟು-ಗಳೂ, ತಮ್ಮನಿಗೆ ಬಿಸ್ಕತ್ತು, ಬಣ್ಣದ ಪೆನ್ಸಿಲ್ಲುಗಳೂ, ಅಪ್ಪ ಅಮ್ಮನಿಗೆ ಹಣ್ಣು-ಹಂಪಲು, ಹೆಂಡತಿಗೆ ಹೂವುಹಾರ ಪ್ರತಿದಿನವೂ ಸಿಕ್ಕಹತ್ತಿದವು. ಕಂಡರೂ ಮಾತಾಡಿಸದೆ ಇದ್ದವನು ಹೆಂಡತಿ ತಮ್ಮನನ್ನೂ, ನಾದಿನಿಗಂಡನನ್ನೂ ಹುಡುಕಿ-ಕೊಂಡು ಹೋಗಿ ಸಲಿಗೆ ವಿಶ್ವಾಸಗಳಿಂದ ವಿಚಾರಿಸತೊಡಗಿದನು. ಹೆಚ್ಚೇಕೆ ಸಾತ್ವಿಕತೆಯೂ, ಸರ್ವತ್ರ ಪ್ರೀತಿ ವಿಶ್ವಾಸಗಳೂ ತುಂಬಿತುಳುಕಿ, ಪ್ರತಿ ರೋಮ-ಕೂಪದಿಂದಲೂ ಜಿನುಗಹತ್ತಿತ್ತೆಂದು ಹೇಳಿದರೆ ಇದೇನೂ ಅತಿಶಯೋಕ್ತಿಯಾಗ-ಲಾರದು. ಈ ಮಾರ್ಪಾಡನ್ನು ಕೇಳಿ ಅವನ ಅತ್ತೆ ಮಾವಂದರು ಅವನ ಮದುವೆ ಯಾದಮೇಲೆ ಹತ್ತಿರ ಬರುವುದಕ್ಕೇ ಹೆದರುತ್ತಿದ್ದವರ ಒಂದು ಭಾನುವಾರ ಬಂದು ಅಳಿಯನನ್ನು ಕಂಡು ಮಾತನಾಡಿ ಸಂತೋಷ ಪಡಬೇಕೆಂದು ಹವಣಿಸಿಕೊಂಡರು,

ಹೀಗೆ ಹತ್ತು ಹನ್ನೆರಡು ದಿನಗಳು ಕಳೆದವು ಹದಿಮೂರನೆಯ ದಿವಸ, ಪುಟ್ಟುವಿಗೆ ಮೈ ಏನೋ ಸ್ವಲ್ಪ ಇರಸುಮುರಸಾಗಿ ಕಂಡು ಬಂದಿತು. ಮನಸ್ಸಿಗೆ ಹರ್ಷವಿಲ್ಲದಂತೆ ತೋರಿತು ಕಾರಣವೇನೂ ತಿಳಿಯಲಿಲ್ಲ. ಮಾರನೆಯ ದಿನ ಈ ಚಿಹ್ನೆಗಳೆಲ್ಲಾ ಹೆಚ್ಚಿದವು. ಆವನ ಸ್ನೇಹಿತರೂ ಸಹ "ಏಕಯ್ಯಾ, ಪುಟ್ಟೂ ರಾಯ, ಮೊದಲಿನ ಲವಲವಿಕೆಯೇ ನಿನ್ನಲ್ಲಿ ಕಾಣುವುದಿಲ್ಲವಲ್ಲ ಈಚೆಗೆ ನಮ್ಮ

ಹತ್ತಿರ ಜಗಳ ಮಾಡುವುದನ್ನು ಕೂಡ ನಿಲ್ಲಿಸಿಬಿಟ್ಟಿದ್ದೀಯೆ !" ಅಂದರು, ಒಬ್ಬನು "ಅಯ್ಯೋ, ನೀನು ಖಾರಬಿಟ್ಟಿರುವುದು ಆಶ್ಚರ್ಯ. ನನಗಂತೂ ಖಂಡಿತ ಸಾಧ್ಯವಿಲ್ಲ- ಜ್ವರ ಬಂದ ಬಾಯಿಗೂ ಸಹ ಸ್ವಲ್ಪ ಉಪ್ಪಿನಕಾಯಿ, ರಸ, ಸೋಕಿಸದಿದ್ದರೆ ಬದುಕು ವುದಕ್ಕೇ ಆಗುವುದಿಲ್ಲ" ಎಂದನು.

ಇನ್ನೊಬ್ಬನು "ನೋಡು ಪುಟ್ಟೂ, ಇವತ್ತು ನಮ್ಮ ಮನೆಯಲ್ಲಿ ಬೆಳದಿಂಗಳೂಟ-ಬಿಸಿಬೇಳೆ ಹುಳಿಯನ್ನ ಇತ್ಯಾದಿ! ನಿನಗೆ ಗೊತ್ತೇ ಇದೆ, ನಮ್ಮಜ್ಜಿ ಬಿಸಿಬೇಳೆ ಹುಳಿಯನ್ನವನ್ನು ಎಷ್ಟು ಚೆನ್ನಾಗಿ ಮಾಡುತ್ತಾಳೆಂಬುದು, ಹೋದ ವರ್ಷದಂತೆಯೇ ಈ ಸಲವೂ ನಿನ್ನನ್ನು ಕರೆಯೋಣ ಎಂದು ನೋಡಿದೆ. ಆದರೆ, ಈ ನಿನ್ನ ಖಾರ- ಬಿಟ್ಟಿರುವ ವ್ರತಕ್ಕೆ ಭಂಗತರಬಾರದೆಂದು ಸುಮ್ಮನಿದ್ದುಬಿಟ್ಟೆ ಎಂದನು.

ಪುಟ್ಟುವಿಗೆ ಆವರ ಮನೆಯ ಹಿಂದಿನ ವರ್ಷದ ಬಿಸಿಬೇಳೆ ಹುಳಿಯನ್ನವು ಚೆನ್ನಾಗಿಯೂ ಜ್ಞಾಪಕವಿದ್ದಿತು – ಪಂಥ್ಯ ಕಟ್ಟಿ ಐದನೇ ಸಲ ಹಾಕಿಸಿಕೊಂಡಿದ್ದ. ಅದನ್ನು ಯೋಚಿಸುತ್ತಿರುವ ಹಾಗೆಯೇ ಬಾಯಲ್ಲಿ ನೀರೂರಿತು. ಆಲೋಚಿಸಿದನು– ಆದೀತೆ ಇನ್ನು ಮೇಲೆ ಬಿಸಿಬೇಳೆ ಹುಳಿಯನ್ನವನ್ನು ತಿನ್ನುವ ಹಾಗೇ ಇಲ್ಲ!– ಬಿಸಿಬೇಳೆ ಹಾಗಿರಲಿ, ಬರೀ ಹುಳಿಯನ್ನವನ್ನು ಸಹ ಮುಟ್ಟುವಂತಿಲ್ಲ ! ಇನ್ನೊಬ್ಬ ಸ್ನೇಹಿತನು ಹೇಳಿದ ಉಪ್ಪಿನಕಾಯಿ ರಸವೂ ಅಷ್ಟೆ .... ಪುಟ್ಟುವಿಗಾದರೋ ಉಪ್ಪಿನಕಾಯಿ ಎಂದರೆ ಪ್ರಾಣ. ಆದರಲ್ಲಿಯೂ ನೆಲ್ಲೀಕಾಯಿ ಉಪ್ಪಿನಕಾಯಿನ ರಸ ಎಂದರೆ ಪ್ರಾಣ — ಬೇರೆ ಏನಿಲ್ಲದಿದ್ದರೂ, ಬರೀ ರಸದಲ್ಲಿಯೇ ಅನ್ನ ಕಲಿಸಿ, ಸ್ವಲ್ಪ ಎಣ್ಣೆ ಹಾಕಿಕೊಂಡು ಇಡೀ ಊಟವನ್ನೇ ಮಾಡಿಬಿಡುವನು. ಇನ್ನು ಅದೆಲ್ಲಾ ಸ್ವಪ್ನಪ್ರಾಯ ! ಹಾಗೇಯೇ ನೋಡಿದರೆ, ಚಟ್ಣಿಯೂ ಅಷ್ಟೇ ! ಚೆನ್ನಾಗಿ ಖಾರ ಹಾಕಿ ಅರೆದ ಕಾಯಿ ಚಟ್ಣಿ ಅಂದರೆ ಅಮೃತವಲ್ಲವೆ ! ಅದಕ್ಕೆ ಪುದೀನ ಸೊಪ್ಪು ಸೇರಿಸಿ ಅರೆದರಂತೂ ಇನ್ನೂ ಸೊಗಸು ! ಆಮೇಲೆ .... ಛೀ, ಹೀಗೆ ಬಿಟ್ಟು ಬಿಟ್ಟ ಪದಾರ್ಥಗಳ ಮೇಲೆ ಮನಸ್ಸನ್ನೋಡಿಸುವುದು ಯುಕ್ತವಲ್ಲ: ಮನಸ್ಸನ್ನು ಅಧೀನದಲ್ಲಿಟ್ಟು ಕೊಳ್ಳಬೇಕು .... ಆಗಲೇ ಎರಡು ವಾರ ಕಳೆಯಲಿಲ್ಲವೇ ! ಹೀಗೆಯೇ ಅಭ್ಯಾಸವಾಗಿಬಿಡುತ್ತೆ. ಎಂದಂದು ಕೊಂಡು ಮನಸ್ಸನ್ನು ಬೇರೆ ಕಡೆ ತಿರುಗಿಸಿ, ಮನಸ್ಥೈರ್ಯ, ಸಾತ್ವಿಕತೆ, ಅದರಿಂದುಂಟಾಗುವ ತೇಜಸ್ಸು, ಓಜಸ್ಸು ಇತ್ಯಾದಿಗಳನ್ನು ಮನನಮಾಡುತ್ತಾ ಮನೆ ಸೇರಿದನು,

ಕೈಕಾಲು ತೊಳೆದುಕೊಂಡು ಊಟಕ್ಕೆದ್ದಾಗ "ಅಮ್ಮ. ಏನಡಿಗೆ ?" ಎಂದನು,

ತಾಯಿಯು ಏನು ಮಾಡಲೋ, ಪುಟ್ಟು ? ಯಥಾಪ್ರಕಾರ ಅನ್ನ. ಸಿಹಿ ಸಾರು, ಖಾರ ಪಾಕದ ಬದನೇಕಾಯಿ ಪಲ್ಯ ಮತ್ತೇನು ಮಾಡಲಿ ? ಎಲ್ಲರಿಗೂ ಮೊನ್ನೆ ಬಂದಿದ್ದ ಈರನಗೆರೆ ಬದನೆಕಾಯಿ ಎಣ್ಣೆಗಾಯಿ ಮಾಡಿದ್ದೆ. ಖಾರವಾಗಿ ಹೇಗಿತ್ತು ಅಂತೀಯ - ಎಲ್ಲರೂ ಚಪ್ಪರಿಸಿಕೊಂಡು ಮೇಲೆ ಮೇಲೆ ಹಾಕಿಸಿಕೊಂಡು ತಿಂದರು - ಮಾಡಿದವಳಿಗೆ ನನಗೇ ಉಳಿದಿರಲಿಲ್ಲ ! ಆದರೆ ಅದನ್ನೆಲ್ಲಾ ನಿನಗೆ ಹೇಳಿ ಏನು ಪ್ರಯೋಜನ ? - ನೀನಂತೂ ಖಾರ ಬಿಟ್ಟು ಬಿಟ್ಟಿದೀಯಲ್ಲಾ ! - ಹರ ಎಂದರೆ ಹೀಗಪ್ಪ ! ಎಂದಳು.

ಬದನೇಕಾಯಿ ಎಣ್ಣೆಗಾಯಿ ! ಪುಟ್ಟುವಿಗೆ ಅಷ್ಟು ಗಟ್ಟಿ ಮನಸ್ಸಿದ್ದರೂ ತಡೆಯುವುದು ಕಷ್ಟವಾಯಿತು. ಬಡಿಸಿದ್ದರಲ್ಲಿ ಅರ್ಧವನ್ನೆಲ್ಲಾ ಬಿಸಾಡಿ, ಏನೋ ಊಟದ ಶಾಸ್ತ್ರವನ್ನು ಮುಗಿಸಿದನು. ಊಟ ಮಾಡಿದ ಬಾಯಿಗೆ ಎಂದು ಎಲ್ಲರೂ ಹುರಿಗಾಳನ್ನು ತಿನ್ನುತ್ತಿದ್ದರು. ಅವನ ತಂಗಿಯು "ಪುಟ್ಟಣ್ಣ, ಈ ಸಲ ಹುರಿ-ಗಾಳು ಎಷ್ಟು ಚೆನ್ನಾಗಿದೇಂತ ! ಹಿಂದೆ ಯಾವಾಗಲೂ ಅಮ್ಮ ಇಷ್ಟು ಹದವಾಗಿ ಮಾಡಿರಲಿಲ್ಲ ನೀನು ಖಾರ ಬಿಡದೇಇದ್ದರೆ ಅದನ್ನು ಎಷ್ಟು ಹೊಗಳುತಿದ್ದೆಯೋ !" ಎಂದಳು. ಪುಟ್ಟುವು ಮಾತನಾಡದೆ ತನ್ನ ಕೊಂಡಿಗೆ ಹೊರಟುಹೋದನು.

ರಾತ್ರಿ ಚೆನ್ನಾಗಿ ನಿದ್ದೆಯೇ ಬರಲಿಲ್ಲ. ಏನೇನೋ ಸ್ವಪ್ನಗಳು ಎಲ್ಲಾ ಊಟದ್ದೇ ! ಬಿಸಿಬೇಳೆ ಹುಳಿಯನ್ನ ಬದನೆಕಾಯಿ, ಎಣ್ಣೆಗಾಯಿ, ನೆಲ್ಲಿಕಾಯಿ, ಉಪ್ಪಿನಕಾಯಿ ಚಟ್ಣಿ, ಖಾರದ ಹುರಿಗಾಳು ಒಂದರೊಂದಿಗೊಂದು ಕಣ್ಣುಮುಚ್ಚಾಲೆ ಆಡುವಂತೆ ತೋರಿತು. ಒಂದುಸಲ ಉಪ್ಪಿನಕಾಯಿ ಸಿಕ್ಕಿ ಹಾಕಿ ಕೊಳ್ಳುವುದು. ಇನ್ನೊಂದು ಸಲ ಎಣ್ಣೆಗಾಯಿ; ಮತ್ತೊಂದು ಸಲ ಬಿಸಿಬೇಳೆ ಹುಳಿಯನ್ನ ! ಇವುಗಳ ಜತೆಗೆ ಖಾರದ ಹುರುಳಿಹಪ್ಪಳ, ಹುಣಸೇತೊಕ್ಕು ಹೇಗೋ ಬಂದು ಸೇರಿಕೊಂಡು ಬಿಟ್ಟವು ! ತೊಕ್ಕು ಎಲ್ಲವನ್ನೂ ಅಟ್ಟಿಸಿಕೊಂಡು ಹೋಗಲಾರಂಭಿಸಿತು, ಆದರೆ ಇದ್ದಕ್ಕಿದ್ದ ಹಾಗೆಯೇ ಕಾಯಿ ಚಟ್ಣಿಯನ್ನು ಯಾರೂ ಹಿಡಿಯುವುದಕ್ಕೆ ಆಗಲಿಲ್ಲ ಎಲ್ಲಿ ನೋಡಿದರೂ ಚಟ್ಣಿಯೇ--ಆದರೆ ಕೈಗೆ ಮಾತ್ರ ಸಿಕ್ಕುವುದಿಲ್ಲ ! ತಪ್ಪಿಸಿಕೊಂಡು ಓಡುತ್ತಾ ಕಿಲ ಕಿಲ ಎಂದು ನಗುವುದು. ಇದನ್ನು ಕಂಡು ಉಪ್ಪಿನಕಾಯಿ— ಅಣಕಿಸುವುದು ಒಂದುಕಡೆ ಚಟ್ಣಿ ಒಂದುಕಡೆ ಉಪ್ಪಿನಕಾಯಿ .. ಚಟ್ಣಿ, ಉಪ್ಪಿನ ಕಾಯಿ ... ಯಾರೂ ಇದನ್ನು ಹಿಡಿಯುವಹಾಗೆಯೇ ಇಲ್ಲವೆ ? ಪುಟ್ಟುವು ಇದೇನು ಕಷ್ಟ ಎಂದು ಹಿಡಿಯ ಹೋಗುವನು. ಚಟ್ನಿಯನ್ನು ಉಪ್ಪಿನಕಾಯಿ ಅಣಕಿಸು ವುದು. ಉಪ್ಪಿನಕಾಯನ್ನು ಅಟ್ಟಿಸಿಕೊಂಡು ಹೋದರೆ ಚಟ್ಣಿ ಅಣಕಿಸಿ ನಗುವುದು ಚಟ್ಣಿ, ಉಪ್ಪಿನಕಾಯಿ... ಉಪ್ಪಿನಕಾಯಿ ಚಟ್ಣಿ—... ಚಟ್ಣಿ, ಉಪ್ಪಿ

"ಏನೂಂದ್ರೆ, ಇದೇನು ಹೀಗೆ ಕನವರಿಸುತ್ತಿದ್ದೀರಿ ? ಕೆಟ್ಟ ಸ್ವಪ್ನವಾದರೆ ಸ್ವಲ್ಪ ಎಚ್ಚರ ಮಾಡಿಕೊಳ್ಳಿ, ಎಂದಳು ಪುಟ್ಟುವಿನ ಹೆಂಡತಿ.

ಪುಟ್ಟುವು ಎಚ್ಚತ್ತು "ಏಕೆ, ಏನು ಮಾತಾಡಿದೆ ?

"ಏನೋ ಚಟ್ಣಿ, ಚಟ್ಣಿ ಎಂದು ಹಲ್ಲು ಕಡಿಯುತ್ತಾ ಅನ್ನುತ್ತಿದ್ದಿರಿ. ಯಾರನ್ನು ಚಟ್ಣಿ ಮಾಡಿರುವಿರಿ ? ಎಂದಳು.

ಪುಟ್ಟುವು "ಯಾವುದೋ ಕೆಟ್ಟ ಸ್ವಪ್ನ" ಎಂದು ಹೇಳಿ, ಗೆಡ್ಡೆಗೆಣಸುಗಳನ್ನು ತಿಂದು ಪರಮ ಸಾತ್ವಿಕರಾಗಿ ಆಚಂದ್ರಾರ್ಕ ಕೀರ್ತಿ ಗಳಸಿದ ವಸಿಷ್ಟ ವಿಶ್ವಾಮಿತ್ರ ಸನಕ ಇತ್ಯಾದಿ ಮಹರ್ಷಿಗಳನ್ನು ಧ್ಯಾನಮಾಡುತ್ತಾ ಮಲಗಿಕೊಂಡನು.

ರಾತ್ರಿಯು ಹೇಗೋ ಕಳೆದು ಬೆಳಗಾಯಿತು. ಭಾನುವಾರ ರಜ ದಿವಸ ವಾದುದರಿಂದ ಮನೆಯಲ್ಲಿ ಊಟ ಹೊತ್ತು, ಆದ್ದರಿಂದ ಬೆಳಗ್ಗೆ ಸ್ವಲ್ಪ ಭಾರಿ ಯಾಗಿಯೇ ತಿಂಡಿ, ಆ ದಿನ ಬಹಳ ದಿವಸಗಳ ಮೇಲೆ ಮಸಾಲೆದೋಸೆಯನ್ನು ಮಾಡಿದ್ದರು. ಬಿಸಿಬಿಸಿ ದೋಸೆ, ಒಳ್ಳೆ ಮಸಾಲೆ ಹಾಕಿದ ಈರುಳ್ಳಿ ಆಲೂಗಡ್ಡೆ ಪಲ್ಯ ಕೇಳಬೇಕೇ ಅದರ ಸ್ವಾರಸ! ಎಲ್ಲರೂ ಹಿ ! ಹಿ ! ಎಂದು ಹಾಕರಿಸುತ್ತಾ ಬಾಯಿ ಚಪ್ಪರಿಸುತ್ತಾ, ನಾಲ್ಕು - ಐದು ಮಸಾಲೆದೋಸೆಗಳನ್ನು ಹೊಡೆಯುತ್ತಿದ್ದರು. ಪುಟ್ಟುವಿನ ತಾಯಿಯು "ಮಗೂ, ನಿನಗೋಸ್ಕರ ಎರಡು ಖಾಲಿದೋಸೆ ಹಾಕಿಟ್ಟಿ-ದ್ದೇನೆ. ಸ್ವಲ್ಪ ಸಕ್ಕರೆ ಹಾಕಿಕೊಡಲೆ ? " ಎಂದಳು,

ಎರಡು ವಾರಗಳಿಂದ ಸಪ್ಪೆ ಮತ್ತು ಸಿಹಿ ತಿಂದು ಪುಟ್ಟುವಿಗೆ ನಾಲಿಗೆಯೆಲ್ಲಾ ಕೆಟ್ಟುಹೋಯಿತು, ಸಕ್ಕರೆ ಹಾಕಿದ ಖಾಲಿದೋಸಗಳನ್ನು ನೋಡಿದೊಡನೆಯೆ ವಾಂತಿ ಬರುವ ಹಾಗಾಯಿತು, "ನನಗೇನೂ ಬೇಡ, ಮೈಯಲ್ಲಿ ಸರಿಯಿಲ್ಲ" ಎಂದು ಹೇಳಿ ಬರೀ ಕಾಫಿ ಕುಡಿದು ಕೊರಡಿಗೆ ಹೊರಟುಹೋದನು.

ತುಂಬಾ ಬೇಸರ. ಏನೋ ಜುಗುಪ್ಸೆ. ಓದೋಣವೆಂದು ಕೂತನು. ಪುಸ್ತಕವು ಬೇಜಾರಾಗಿ ಅದನ್ನು ಒಂದು ಮೂಲೆಗೆ ಎಸೆದನು - ಹಾಳೆ ತೆಗೆದತಕ್ಷಣ "ಭಾನುವಾರ" ಎಂಬ ಪದವೇ ಕಣ್ಣಿಗೆ ಬೀಳಬೇಕೇ ? ಊರಿಗೆ ಹೆಸರಿಟ್ಟರೂ, ಹಾಗೆಯೇ ಹೆಸರಿಡುವುದು ? ಬರಿಯೋಣವೆಂದು ನೋಡಿದನು, ಮಸಿಕುಡಿಕೆಯಲ್ಲಿ ಮಸಿಯೇ ಆಗಿಹೋಗಿದ್ದಿತು, ಕುಡಿಕೆಯನ್ನು ಎತ್ತಿ ಕುಕ್ಕಿದನು - ಎರಡು ಹೋಳಾಯಿತು, ಲೇಖನಿಯನ್ನು ಕುಕ್ಕಿದನು - ಮುಳ್ಳು ಮುರಿಯಿತು. ಇದರಲ್ಲಿ

ಏನೋ ಒಂದು ಬಗೆಯ ಸಮಾಧಾನವು ಕಂಡು ಬಂದಿತು. ಮೇಜಿನಮೇಲಿದ್ದ ಪದಾರ್ಥಗಳನ್ನೆಲ್ಲಾ ಒಂದೊಂದನ್ನಾಗಿ ಎತ್ತಿ ಒಗೆಯತೊಡಗಿದನು. ಗಾಜಿನ ಪೇಪರ್ ವೇಟ್, ಗಾಜಿನ ಬಟ್ಟಲು, ಗಾಜಿನ ದೀಪ, ಎಲ್ಲವನ್ನೂ ನೆಲದಮೇಲೆ ಬಡಿದನು. ಅವು ಪುದಿಪುಡಿಯಾಗುವುದನ್ನು ನೋಡಿ ವಿಕಟವಾಗಿ ನಕ್ಕನು, ರಾತ್ರಿ ಚಟ್ನಿ. ಉಪ್ಪಿನಕಾಯಿ ಕನಸಿನಲ್ಲಿ ಕಿಲಕಿಲ ನಕ್ಕದ್ದು ಜ್ಞಾಪಕಕ್ಕೆ ಬಂದಿತು, ತಾನೂ ಹಾಗೆಯೇ ನಗುವುದಕ್ಕೆ ಶುರುಮಾಡಿದನು. ಮೇಜಿನ ಮೇಲಿದ್ದ ಸಾಮಾನೆಲ್ಲಾ ಮುಗಿಯಿತು. ಪುಸ್ತಕಗಳನ್ನು ತೆಗೆಯತೊಡಗಿದನು ......

ಅಷ್ಟು ಹೊತ್ತಿಗೆ ಸರಿಯಾಗಿ ಯಾರೋ ಒಬ್ಬರು ಒಳಗೆ ಬಂದರು—ಅವನ ಭಾವ ಮೈದ, ಮತ್ತು ನಾದಿನಿ ಗಂದ. ಮೈದುನನು ಭಾವಯ್ಯಾ, ಅಪ್ಪಾ, ಅಮ್ಮ ಊರಿನಿಂದ ನಿಮ್ಮನ್ನು ನೋಡುವುದಕ್ಕೆ ಬಂದಿದ್ದಾರೆ ಕೆಳಗೆ ನಿಮ್ಮ ತಾಯಿ ಹತ್ತಿರ ಮಾತಾಡುತ್ತಿದ್ದಾರೆ ಅಲ್ಲ, ನಿನ್ನೆ ನೀವು ತಂದು ಕೊಡುತ್ತೆನೆಂದು ಹೇಳಿದ ಫೌಂಟೆನ್ ಪೆನ್ ತಂದಿರಾ ? ಎಂದನು.

ನಾದಿನಿಗಂಡ "ಏನು ಪುಟ್ಟುರಾವ್, ಇವತ್ತು ವ್ಯಾಟಿನಿ ಸಿನಿಮಾಗೆ ಕರೆದುಕೊಂಡು ಹೊಗುತ್ತೇನೆಂದು ಹೇಳಿದ್ದಿರಲ್ಲಾ, ಎಷ್ಟುಹೊತ್ತಿಗೆ ಹೊರಡೋಣ ?" ಎಂದನು.

ಪುಟ್ಟುರಾಯನು "ಫೌಂಟೆನ್ ಪೆನ್ ! ಸಿನಿಮಾ ! ಸಿನಿಮಾ ಫೌಂಟೆನ್‌ಪೆನ್ ! ಹಹ್ಹಹ್ಹ ! ....ತೆಗೆದುಕೋ ಫೌಂಟೆನ್ ಪೆನ್ " ಎಂದು ಒಂದು ದಪ್ಪ ಪುಸ್ತಕವನ್ನು ತೆಗೆದು ಎಸೆದನು. ಅದು ಗುರಿಯಾಗಿ ಬಂದು ಮೈದುನನ ಮೂಗನ್ನು ಅಪ್ಪಿತು. ಮತ್ತೊಂದು ಪುಸ್ತಕವು ನಾದಿನಿ ಗಂಡನ ಎದೆಯನ್ನು ತಾಕಿತು. ಇಬ್ಬರೂ ಬೆಪ್ಪಾದರು. ಮತ್ತೆರೆಡು ಪುಸ್ತಕಗಳು ಬಂದವು ಅವುಗಳ ಹಿಂದೆ ಪುಟ್ಟುರಾಯನು ಹಾರಿ ಬಂದನು. ನಾದಿನಿ ಗಂಡನು ತಪ್ಪಿಸಿಕೊಂಡು ಬಂದು ಸೋಫಾದ ಹಿಂದೆ ಔತುಕೊಂಡನು. ಮೈದುನ ಸಿಕ್ಕಿ-ಹಾಕಿಕೊಂಡನು. ಪುಟ್ಟುವು ಅವನನ್ನು ಗಿರಗಿರ ತಿರುಗಿಸಿ, ನೆಲಕ್ಕೆ ಅಪ್ಪಳಿಸಿ, ಹೊಸ್ತಿಲಮೇಲಕ್ಕೆ ಎಳೆದು, ಒಂದು ಒದೆತ ಕೊಟ್ಟನು — ಮೈದುನನು ಮಿಂಚಿನ ವೇಗದಿಂದ ಮೆಟ್ಟಿಲುಗಳ ಕೆಳಗೆ ಉರುಳಿದನು ! ಪುಟ್ಟುವು ನಾದಿನಿ ಗಂಡನ ಕಡೆಗೆ ತಿರುಗಿದನು. ಪೈಲ್ವಾನನು ಪಟ್ಟಿಗೆ ಹೊಂಚು ಹಾಕುವಂತೆ ಇಬ್ಬರು ಸೋಫಾ ಸುತ್ತಲೂ ಸುತ್ತುತ್ತಾ ಹೊಂಚು ಹಾಕ ತೊಡಗಿದರು. ಇದ್ದಕ್ಕಿದ್ದಹಾಗೆ ಪುಟ್ಟು-ರಾಯನಿಗೆ ಚಿಕ್ಕಂದಿನಲ್ಲಿ ಆಡುತಿದ್ದ "ಗುಡುಗುಡು" ಆಟವು ಜ್ಞಾಪಕಕ್ಕೆ ಬಂದಿತು. ಅದಲ್ಲಿಯೂ ಹೀಗೆಯೇ ಗೀರಿನ ಹತ್ತಿರ ಹೊಂಚು ಹಾಕುವುದು ! ಒಡನೆಯೇ ಬಾಯಲ್ಲಿ "ಭಲ್, ಗುಡು ಗಡು ಗುಡು" ಎಂದು ಗುಡುಗುತ್ತಾ, ಸಮಯ ನೋಡಿ ತಟಕ್ಕನೆ ಹಾರಿದನು.......

ಕೆಳಗೆ. ಪುಟ್ಟುರಾಯನ ಅತ್ತೆಮಾವಂದಿರು ಅಳಿಯನನ್ನು ನೋಡೋಣವೆಂದು ಊರಿನಿಂದ ಬಂದವರು ಬೀಗಿತ್ತಿಯ ಸಂಗಡ ಸ್ವಲ್ಪ ಮಾತಾಡಿ, ಮೊದಲು ಅಳಿಯನನ್ನು ನೋಡಿ ಆಮೇಲೆ ಸಾವಕಾಶವಾಗಿ ಮಾತಾಡೋಣವೆಂದು ಹೇಳಿ ಮಹಡಿ ಮೆಟ್ಟಲು ಹತ್ತತೊಡಗಿದರು· ಎರಡು ಮೆಟ್ಲು ಹತ್ತುವುದರಲ್ಲಿಯೇ, ಯಾವುದೋ ಒಂದು ಉಂಡೆಯಾದ ಪದಾರ್ಥವು "ಸುಯ್" ಎಂದು ಕವಣೆಯಿಂದ ಬೀಸಿದ ಕಲ್ಲಿನಂತೆ ಬಂದು ಅವರಿಗೆ ತಗಲಿ, ನೆಲದಮೇಲೆ ಮೂರುಮಾರು ದೂರದಲ್ಲಿ ಹೋಗಿ ಬಿದ್ದಿತು. ಏನಿರಬಹುದೆಂದು ನೋಡದರೆ, ತಮ್ಮ ಮಗ ರಾಮು ! ಮೂಗಿನಿಂದ ಧಾರಾಕಾರವಾಗಿ ರಕ್ತ ತಲೆಯಲ್ಲಿ ದೊಡ್ಡ ಘಾಯ "ಅಯ್ಯೋ, ಇದೇನೋ ರಾಮು ! ಎಂದು ಓಡಿಹೋಗಿ ಆವನಿಗೆ ಶೈತ್ಯೋಪಚಾರ ಮಾಡಲಾರಂಭಿಸಿದರು.

ರಾಮುಗೆ ಮಾತನಾಡಲಿಕ್ಕೆ ಚೈತನ್ಯವಿರಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ "ಆಮ್ಮಾ ... ಮೇಲೆ ಭಾವಯ್ಯ !...... ಹುಚ್ಚು" ಎಂದನು, ಆದಕ್ಕೆ ಸರಿಯಾಗಿ ಮಹಡಿಯಲ್ಲಿ ದೊಡ್ಡ ಗಡುಬಿಡಿ ಕೇಳಿಸಿತು. ಕುರ್ಚಿಗಳು, ಮೇಜುಗಳು ಉರುಳಿಬಿದ್ದ ಶಬ್ದ. ಎಲ್ಲರೂ ಮೇಲಕ್ಕೆ ಓಡಿದರು, ಪುಟ್ಟುವಿನ ಕೊರಡಿಗೆ ನುಗ್ಗಿದರು. ಸಾಮಾನುಗಳೆಲ್ಲಾ ಚೆಲ್ಲಾಪಿಲ್ಲಿ ...ಕೊಠಡಿ ಮಧ್ಯದಲ್ಲಿ ಪುಟ್ಟುರಾಯನು ನಾದಿನಿ ಗಂಡನನ್ನು ಕೆಳಗೆ ಹಾಕಿ ಆದುಮಿಕೊಂಡು ಎದೆಯ ಮೇಲೆ ಕೂತು "ಭಲ್, ಗುಡುಗುಡು" ಹೇಳುತಿದ್ದಾನೆ !

ಸರಿ, ದೊಡ್ಡ ಕೋಲಾಹಲ. ಎಲ್ಲರೂ ಸಾಹಸಮಾಡಿ ಅರ್ಧ ಉಸಿರು ಹೋಗಿದ್ದ ನಾದಿನಿ ಗಂಡನನ್ನು ಬಿಡಿಸಿಕೊಂಡರು. ಪುಟ್ಟುವು ವಿಕಾರವಾಗಿ ನಗುತ್ತಾ ಕುಣಿಯತೊಡಗಿದನು. ಎಲ್ಲಿರೂ ಸೇರಿ ಅವನನ್ನು ಹಿಡಿದು ಬಂದು ಕುರ್ಚಿಗೆ ಹಗ್ಗಹಾಕಿ ಬಿಗಿದು ಕಟ್ಟಿದರು. ರಾಮುವನ್ನು ಆಸ್ಪತ್ರೆಗೆ ಸಾಗಿಸಿದರು. ಜೀವಕ್ಕೇನು ಅಪಾಯವಿರಲಿಲ್ಲ. ಸಿನಿಮಾಗೆಂದು ಬಂದ ನಾದಿನಿ ಗಂಡನಿಗೆ ಮೈ-ಯಲ್ಲಾ ಬಾಸುಂಡೆಯಾಗಿ ಬರೀ ಭಯದಲ್ಲಿಯೆ ಅರ್ಧ ಜೀವ ಹೋಗಿತ್ತಲ್ಲದೆ ಮತ್ತೇನೂ ಆಗಿರಲಿಲ್ಲ. ಪುಟ್ಟುವಿಗಾದರೋ, ಬುದ್ಧಿಭ್ರಮೆಣೆಯಾಗಿಬಿಟ್ಟಿದೆ ಎಂದು ಮಂತ್ರವಾದಿಗಳು ವೈದ್ಯರು, ಹಕೀಮರು ಎಲ್ಲರನ್ನು ಕರೆಸಿದರು. ಮಂತ್ರವಾದಿಯು ಬಂದು ನೋಡಿ "ಇವನಿಗೆ ಮೋಹಿನಿ ಹಿಡಿದಿದೆ, ಬಿಡಿಸಬೇಕು" ಎಂದನು. ಪಂಡಿತರು "ಪಿತ್ತ ವಿಕಾರವಾಗಿದೆ. ಈಗಲೇ ಕಷಾಯ ಕೊಡುತ್ತೇವೆಂದರು. ಶಾಸ್ತ್ರಿಗಳು ನಂಜುಂಡೇಶ್ವರನಿಗೆ ಮುಡುಪು ಕಟ್ಟಿಡಿ; ಒಂದು ಯಂತ್ರ ಕಟ್ಟುತ್ತೇವೆ. ವಾಸಿಯಾಗುತ್ತದೆ. ಎಂದರು ಒಬ್ಬ ದೊಡ್ಡ ಡಾಕ್ಟರು ಬಂದು "ಇವನಿಗೆ ಹುಚ್ಚು ಒಡನೆಯೇ ಇಂಜಕ್ಷನ್ ಕೊಡಬೇಕು. ಬೆಲೆ ಮೂವತ್ತು ರೂಪಾಯಿ" ಎಂದು ದುಡ್ಡಿಸುಕೊಂಡು "ನಾಳೆ ಆಸ್ಪತ್ರೆಗೆ ಕಳುಹಿಸಿಬಿಡಿ" ಎಂದು ಹೇಳಿ ಹೊರಟು ಹೋದರು.

ದಿನವೆಲ್ಲಾ ಪುಟ್ಟುರಾಯನನ್ನು ಕುರ್ಚಿಗೇಲೇ ಕಟ್ಟಿ, ಕೊಠಡಿಗೆ ಬೀಗ ಹಾಕಿದ್ದರು. ಮನೆಯಲ್ಲಿ ಒಬ್ಬರಿಗಾದರೂ ಹರ್ಷವಿಲ್ಲ. ಎಂದೂ ಇಲ್ಲದೆ ಅಳಿಯನನ್ನು ನೋಡುವುದಕ್ಕೆಂದು ಬಂದು ಹೀಗಾಗಬಹುದೆ ಎಂದು ಅವನ ಅತ್ತೆ ಮಾವಂದಿರಿಗೆ ಸಂಕಟ, ಸಾಲದ್ದಕ್ಕೆ ತಮ್ಮ ಮಗನಿಗೂ ಇನ್ನೊಬ್ಬ ಅಳಿಯನಿಗೂ ಆಗಿರುವ ವಿಪತ್ತು ಬೇರೆ, ಹಾಳು ಯಾವ ಹೊತ್ತಿನಲ್ಲಿ ಈ ಬೀಗರು ಬಂದರೋ ಎಂದು ಪುಟ್ಟುವಿನ ತಂದೆ ತಾಯಿಗಳಿಗೆ ....

ರಾತ್ರಿಯಾಯಿತು. ಪುಟ್ಟುವಿನ ಉದ್ವೇಗವು ಸ್ವಲ್ಪ ಕಡಿಮೆಯಾದಂತಿತ್ತು. ಕೊನೆಗೆ ಅವನನ್ನು ಬಿಚ್ಚಿ ಮಂಚದ ಮೇಲೆ ಮಲಗಿಸಿ ಕೈಕಾಲುಗಳನ್ನು ಕಟ್ಟಿ ಹಾಕಿದರು. ಅವನ ಹೆಂಡತಿಯು "ರಾತ್ರಿ ನಾನು ನೋಡಿಕೊಳ್ಳುತ್ತೇನೆ, ನನಗೇನೂ ಭಯವಿಲ್ಲ ಎಂದು ರಾತ್ರಿಯೆಲ್ಲಾ ಅವನ ಪಕ್ಕದಲ್ಲಿಯೇ ಕೂತಳು. ಅರ್ಧ ರಾತ್ರಿ ಸಮಯ ಸ್ವಲ್ಪ ಜೂಕರಿಸುತ್ತಿದ್ದ ಪುಟ್ಟುವಿಗೆ ಎಚ್ಚರವಾಯಿತು. ಬೆಳಗ್ಗೆ-ಯಿಂದ ಏನೂ ತಿಂದಿರಲಿಲ್ಲ. ಬಹಳ ಹಸಿವಾಯಿತು, ನಿಟ್ಟುಸಿರು ಬಿಟ್ಟನು. ಅವನ ಹೆಂಡತಿಯು ದುಃಖದಿಂದ "ಅಲ್ಲ, ಏನೇನೋ ಹಾಳು ಪುಸ್ತಕಗಳನ್ನು ಓದಿ ಇಲ್ಲದ ಪಥ್ಯವನ್ನೆಲ್ಲಾ ಮಾಡುತ್ತೀರಿ. ಅದರಿಂದಲೇ ಹೀಗಾಗಿದೆ ಎಂದು ಖಂಡಿತ ನನ್ನ ನಂಬಿಕೆ. ದಮ್ಮಯ್ಯ, ಈ ಪಥ್ಯವನ್ನು ಸಾಕುಮಾಡಿ" ಎಂದು ಬೇಡಿದಳು. ಪುಟ್ಟವಿಗೆ ಹೊಟ್ಟೆಯಲ್ಲಿ ಹಸಿವು, ಹೆಂಡತಿಯ ಈ ದೈನ್ಯ ಬೇಡಿಕೆ "ಏನು ಬುದ್ಧಿ ಇಲ್ಲದ ಕೆಲಸ ಮಾಡಿಕೊಂಡೆ" ಎಂದಂದುಕೊಂಡು "ಆಗಲಿ, ಈ ಪಥ್ಯವನ್ನು ಇಲ್ಲಿಗೇ ನಿಲ್ಲಿಸುತ್ತೇನೆ, ಸಾವಿರ ಕಾಲಕ್ಕೂ ಬೇಡ, ನನಗೆ ಈ ಸಾತ್ವಿಕಾಹಾರ" ಎಂದನು,

ಇದನ್ನು ಕೇಳಿ ಆಕೆಗೆ ಅತ್ಯಂತ ಸಂತೋಷವಾಯಿತು. ಒಡನೆಯೇ ಗಂಡನ ಕಟ್ಟುಗಳನ್ನೆಲ್ಲಾ ಬಿಚ್ಚಿದಳು. ಪುಟ್ಟುರಾಯನು "ಹಸಿವುವಾಗುತ್ತಲ್ಲ" ಎಂದನು. ಇಬ್ಬರೂ ಎದ್ದು ಮೆಲ್ಲಗೆ ಹೆಜ್ಜೆ ಮೇಲೆ ಹೆಜ್ಜೆ ಹಾಕುತ್ತಾ ಅಡಿಗೆ ಮನೆಗೆ ಹೋದರು. ಏನೂ ಸಿಕ್ಕಲಿಲ್ಲ. ರಾತ್ರಿ ಮಿಕ್ಕಿದ್ದ ಅನ್ನವನ್ನು ಕಲಗಚ್ಚಿಗೆಂದು ಒಂದು ಕಡೆ ತೆಗೆದಿಟ್ಟಿದ್ದರು ಆ ಅನ್ನವನ್ನೇ ತೆಗೆದುಕೊಂಡು ಸ್ವಲ್ಪ ಸಾರಿನಪುಡೀ ಉಪ್ಪು, ತುಪ್ಪ ಹಾಕಿ ಕಲಸಿಕೊಂಡು ತಿಂದನು. ಖಾರವನ್ನು ತಿಂದು ಎಷ್ಟೋ, ದಿವಸಗಳಾಗಿದ್ದ ಪುಟ್ಟುವಿಗೆ ಆದು ಅಮೃತದಂತಿತ್ತು. "ಖಾರ ಬಿಡುವುದಕ್ಕೆ ನಿಜ ವಾಗಿಯೂ ನನಗೆ ಹುಚ್ಚೇ ಹಿಡಿದಿತ್ತು ಎಂದುಕೊಂಡನು. ಅದನ್ನು ಮುಗಿಸಿ, ಒಂದು ಬಟ್ಟಲು ಮಜ್ಜಿಗೆ ಕುಡಿದು ಮತ್ತೆ ಮೆಲ್ಲಗೆ ಕೊಠಡಿಗೆ ಬಂದನು.

ಹೆಂಡತಿಯು "ನನ್ನಾಣೆ, ಖಂಡಿತ ಇನ್ನು ಮೇಲೆ ಈ ರೀತಿ ಪಥ್ಯ ಮಾಡುವು ದಿಲ್ಲವೆಂದು ಮಾತುಕೊಡಿ" ಎಂದಳು,

ಪುಟ್ಟುವು "ಆ ಪುಸ್ತಕಗಳನ್ನೆಲ್ಲ ನಾಳೆಯೆ ಸುಟ್ಟುಬಿಡುತ್ತೇನೆ. ಇನ್ನು ಮೇಲೆ ಹೀಗೆ ಮಾಡುವುದಿಲ್ಲ" ಎಂದು ಭಾಷೆಕೊಟ್ಟನು.

ಹಾಗೆಯೇ ಆಲೋಚಿಸುತ್ತಾ ಆ ಸಾರಿನಪುಡಿ ಎಷ್ಟು ಚೆನ್ನಾಗಿತ್ತು! ಎಂದನು.

"ಅಯ್ಯೋ ಅದಕ್ಕೇನು, ನಾಳೆ ಇನ್ನೂ ತಿಂದರಾಯಿತು ಅಂದ್ರೆ.

" ಉಪ್ಪಿನಕಾಯಿ ಬೇಕು

ಉಪ್ಪಿನಕಾಯಿ ಬೇಕಾದ ಹಾಗೆ ಇದ್ದೇ ಇದೆಯಲ್ಲಾ ನಿಂಬೆಕಾಯಿ, ನೆಲ್ಲಿಕಾಯಿ, ಹೆರಳೇಕಾಯಿ ಎಲ್ಲಾ ಇದೆ. ಎಷ್ಟು ಬೇಕಾದರು ಹಾಕಿಸಿಕೊಳ್ಳಿ"

ಉಂಡೆ ಮಾವಿನಕಾಯನ್ನೂ ಹಾಕಬೇಕು ...... ಹಾಗೇ ಸ್ವಲ್ಪ ಚಟ್ನಿಯನ್ನೂ ಮಾಡಿಸು, ನಾಳೆ"

ಅಗತ್ಯವಾಗಿ ಆಗಲಿ. ಸ್ವಲ್ಪ ಖಾರಸೇವೆಯನ್ನೂ ಮಾಡಿಸಲೇ ?

"ಹೂಂ....ಸ್ವಲ್ಪ ಖಾರವಾಗಿರುವ ಉಪ್ಪೇರಿಯೂ.......

ಖಾರಬೂಂದಿ ?

" ಆದೂ; ಸ್ವಲ್ಪ ಖಾರದವಲಕ್ಕಿಯೂ "

ಆಗಲಿ, ಖಾರದ ಕೋಡುಬಳೆ, ಖಾರದ ಚಕ್ಕುಲಿ ಎಲ್ಲವನ್ನೂ ಮಾಡಿಸುತ್ತೇನೆ ! "

ಈ ಸರಸ ಸಲ್ಲಾಪಗಳಲ್ಲೇ ರಾತ್ರಿಯೆಲ್ಲಾ ಕಳೆಯಿತು. ಮಾರನೆ ದಿನದಿಂದ ಪುಟ್ಟುರಾಯನು ಬೇರೆ ಮನುಷ್ಯನಾದ ಅನ್ನಿ, ಅಂತೂ ಯಾಕೆ ಹೇಳಿದೆ ಅಂದರೆ-- ಎಂದು ಹೇಳುತ್ತಾ ಭೀಮಣ್ಣನು ಸುತ್ತಲೂ ನೋಡುವುದರಲ್ಲಿ, ನಮ್ಮ ಹೊಸ ಸ್ನೇಹಿತರು ಮಾಯವಾಗಿದ್ದರು,!



" ನಾವು ಕೂಡ ಅಲ್ಪ ಸಂಖ್ಯಾತರು ತಾನೆ, ನಮಗೂ ಮೀಸಲಾತಿ ಇರ್ಲೇ ಬೇಕು.!"

ಆಧುನಿಕ ಅಪಶಕುನಗಳು

ಶಿವು

ನಮ್ಮ ಚಿಕ್ಕಂದಿನಲ್ಲಿ ಯಾವ್ದಾದ್ರೂ ಅತಿಮುಖ್ಯವಾದ ಕೆಲಸಕ್ಕೆ ಹೊರಟಾಗ ಬೆಕ್ಕು ಅಡ್ಡಬಂದ್ರೆ ಅಥವಾ ಒಂಟಿ ಬ್ರಾಹ್ಮಣ ಇದಿರಿಗೆ ಬಂದ್ರೆ,

"ಇದೊಳ್ಳೇ ಅಪಶಕುನ" ಅಂತ ಬಯ್ಕೊಂಡು, ತಿರುಗಿ ಮನೆಒಳಗೆ ಹೋಗಿ ಎರಡು ನಿಮಿಷ ಕೂತಿದ್ದು ನಂತರ ಹೊರಡೋದು ಪರಿಪಾಠವಾಗಿತ್ತು. ನೀವು ಎಷ್ಟೇ ವಿಚಾರವಾದಿಯಾಗಿದ್ರೂ, ಕೊವೂರ್‌ರವರ ಪರಮ ಭಕ್ತನಾಗಿದ್ರೂ, ಈ ಅಪಶಕುನದ ನಂಬಿಕೆಯಿಂದ ತಪ್ಪಿಸಿಕೊಳ್ಳೋದು ಸಾಧ್ಯವಾಗ್ತಿರ್ಲಿಲ್ಲ. ಈಗಿನ ಆಧುನಿಕ ಸಮಾಜ ದಲ್ಲಿ ಕೊಲ್ಲುಕ್ಕೇ ಬರ್ತಿರೋ ಆಟೋರಿಕ್ಷಾ, ಕಾರು, ಬಿ. ಟಿ. ಎಸ್. ಬಸ್ಸುಗಳ ಹಾರಾಟ, ಹಾವಳೀಲಿ ಯಾವ ಮಾರ್ಜಾಲ ವೀರನೂ ಹಾದಿ ಕ್ರಾಸ್ ಮಾಡೋ ಅಷ್ಟು ಎದೆಗಾರಿಕೆ ಹೊಂದಿರೊಲ್ಲ. ಇನ್ನು ಬ್ರಾಹ್ಮಣ ಅಂತ ಗೊತ್ತಾಗೋಹಾಗೆ ಜುಟ್ಟು ಬಿಟ್ಟು, ಜನಿವಾರ ತೊಟ್ಟು, ಪಂಚೆಉಟ್ಟು, ನಡೆದು ಬರೋ ಸ್ಪೀಷೀಸ್, ಇನ್ನೇನು ಎಂಡೇಂಜರ್ಡ್ ಹಂತದಲ್ಲಿರೋದ್ರಿಂದ, ಈ ಅಪಶಕುನದ ಸಂಭವಕೂಡ ಬಹಳ ಕಡಿಮೆ. ಹಾಗೆಂದ ಮಾತ್ರಕ್ಕೆ ಈಗಿನ ಕಾಲದಲ್ಲಿ ಅಪಶಕುನಗಳೇ ಇಲ್ಲ ಅಂತ ತಿಳೀಬೇಡಿ. ಇವೆ, ಬೇಕಾದಷ್ಟು ಇವೆ. ಆಧುನಿಕ ಅಪಶಕುನಗಳನ್ನ ಗುರ್ತಿಸೋ ಜಾಣತನ ಇರ್ಬೇಕು ಅಷ್ಟೆ. ಈ ಕೆಲಸ ನಿಮಗೆ ಸುಲಭ ಆಗ್಩ೀ ಅಂತ ಕೆಳಗೆ ಹಲವು ಸನ್ನಿವೇಶಗಳನ್ನು ನೀಡಿದ್ದೇವೆ. ಪರಾಂಬರಿಸಿ,

ಬೆಳಗಾಗೆದ್ದು, ಮುಖ ತೊಳೆದು, ರೇಡಿಯೊ ಹಾಕ್ತೀರ. ರೇಡಿಯೊದಲ್ಲಿ ಸುದ್ದಿಗೆ ಬದಲು, ತೀವ್ರ ಶೋಕವನ್ನುಂಟುಮಾಡುವ ಸಿತಾರ್‌ವಾದನ ಕೇಳಿ ಬರುತ್ತೆ. ಇದೇನು ಬಂತಪ್ಪಾ ಅಂತ ಟಿ. ವಿ. ಆನ್ ಮಾಡಿದರೆ, ಕಣ್ಣಲ್ಲಿ ನೀರೇ ಬರೋಹಾಗೆ ಜುಬ್ಬಧಾರಿಯೊಬ್ಬ ಸರೋಡ್ ನುಡಿಸ್ತಾ ಇರ್ತಾನೆ. ಸರಿ, ಯಾವ್ದೊ ವಿ.ಐ.ಪಿ. ನೆಗೆದುಬಿದ್ದ ಅನ್ನೋದು ಗ್ಯಾರಂಟಿ. ಬೆಳಗಾಗೆದ್ದು ಮೊದಲ ಅಪಶಕುನ,

ನಿಮ್ಮ ಖಾತೆಯಿಂದ ಹಣ ತೆಗೆಯಲು ಬ್ಯಾಂಕಿಗೆ ಹೋಗ್ತೀರ. ಒಂದು ವಿತ್‌ಡ್ರಾಯಲ್ ಸ್ಲಿಪ್ ತಗೊಂಡು, ಎಲ್ಲಾ ಸರಿಯಾಗಿ ಬರೆದು ಕೌಂಟರಿನಲ್ಲಿರೋ ಅಪ್ಸರೆಗೆ ಕೊಡ್ತೀರ. ಆ ಅಪ್ಸರೆ, ನಿಮ್ಮ ಸ್ಲಿಪ್‌ನ ಹಿಂದೆ ಮುಂದೆ ತಿರುಗಿಸಿ ನೋಡಿ ಎದ್ದು ನಿಂತು ದೂರದಲ್ಲಿರೋ ಕಪಾಟಿನ ಒಳಿ ಹೋಗ್ತಾಳೆ, ಕಪಾಟಿನ ಡ್ರಾ, ತೆಗೆದು ಅಲ್ಲಿರೋ ಸಿಗ್ನೇಚರ್ ಕಾರ್ಡ್‌ನ ತದೇಕ ದೃಷ್ಟಿಯಿಂದ ನೋಡ್ತಾಳೆ. ಉಹುಂ, ಅಂತ ಅವಳು ತಲೆ ಆಡಿಸೋದಕ್ಕೆ ಸರಿಯಾಗಿ ಅವಳು ಮುಡಿದ ಮಲ್ಲಿಗೆ ಹೂ ಕುಚ್ಚು ತಾಳ ಹಾಕುತ್ತೆ. ಅವಳು ನಿಮ್ಮ ಸ್ಲಿಪ್‌ನೂ ಸಿಗ್ನೇಚರ್ ಕಾರ್ಡ್‌ನೂ ತೆಗೆದುಕೊಂಡು ಇನ್ನೂ ದೂರದಲ್ಲಿ ದೊಡ್ಡ ಮೇಜಿನಮುಂದೆ ಕೂತಿರೋ ಕನ್ನಡಕದ ಗೃಧ್ರನ ಪತ್ತಿರ ಬಳುಕುತ್ತಾ ನಡೀತಾಳೆ, ಇನ್ನೊಂದು ಅಪಶಕುನ.


ನಿಮ್ಮ N.S.C. ಗೆ ಡ್ಯೂ ಡೇಟ್ ಆಗಿದೆ. ಸಾವಿರ ರೂಪಾಯಿ ಕೈಗೆ ಬಂದರೆ ಏನೆಲ್ಲಾ ಮಾಡಬಹುದು ಅಂತ ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಾ G.P.O. ಗೆ ಹೋಗ್ತೀರ. ಯಾರ್ನೊ ಕೇಳಿದ್ರೆ 40ನೇ ಕೌಂಟರಿಗೆ ಹೋಗಿ ಅಂತಾರೆ. ಅಲ್ಲೋ, ಹನುಮಂತನ ಬಾಲದ ಹಾಗೆ ಕ್ಯೂ (ಅಥವಾ ಖೊಮೇನಿ ಗಡ್ಡದ ಹಾಗೆ) ಕಷ್ಟಪಟ್ಟರೆ ಫಲವುಂಟು, ಕೈ ಕೆಸರಾದರೆ ಬಾಯಿ ಯೋಗರ್ಟ್ ಅಂತೆಲ್ಲಾ ಹೇಳಿ ಕೊಂಡು ಕ್ಯೂ ನಲ್ಲಿ ನಿಲ್ತೀರ, ಒಂದು ಘಂಟೆ ಕಾದಮೇಲೆ ನಿಮ್ಮ ಸರದಿ ದೇಶಾ-ವಾರದ ನಗೆ ಬೀರುತ್ತಾ ಕೌಂಟರಿನ ಚಿಗುರು ಮೀಸೆಗೆ "ಮೆಚೂರಾಗಿದೆ ಸಾರ್, ಎನ್-ಕ್ಯಾಷ್‌ಮೆಂಟ್‌ಗೆ ಬಂದಿದೀನಿ" ಅಂತ ಹೇಳ್ತಾ ನಿಮ್ಮ N.S.C. ಕೊಡ್ತೀರ. ಗತ್ತಿನಿಂದ ಅವ ಅದನ್ನ ಕೈಗೆತ್ತಿಕೊಂಡು ಯಥಾಪ್ರಕಾರ ಹಿಂದೆ ಮುಂದೆ ತಿರುಗಿಸಿ ನೋಡಿ, ಪಕ್ಕದ ಊರ್ವಶಿ ಕಡೆ ತಿರುಗಿ "ಮ್ಯಾಡಂ. ಈ ಸೀರೀಸ್, 42ನೇ ಕೌಂಟರ್ ಅಲ್ವಾ" ಅಂತ ಉದ್ಗರಿಸ್ತಿರೋವಾಗ ನಿಮ್ಮ ದೃಷ್ಟಿ 42ನೇ ಕೌಂಟರಿಗೆ ಹರಿಯುತ್ತೆ, ಅಲ್ಲಿ ಗಡ್ಡದಷ್ಟೋ, ಬಾಲದಷ್ಟೋ ಅಂತೂ ಒಂದು ದೊಡ್ಡಕ್ಯೂ, ಶಕುನ ಖರಾಬ್.

ನಿಮ್ಮ ಮನೆ ಹೊರ ಬಾಗಿಲ ಕಾಲಿಂಗ್ ಬೆಲ್ 'ಟ್ರಿನ್' ಅನ್ನುತ್ತೆ. ಬಾಗಿಲು ತೆರೆದರೆ, ನಾಲ್ಕು ಜನ ಧಾಂಡಿಗರು 'ನಮಸ್ಕಾರ ಸಾರ್' ಅನ್ನುತ್ತಾ ನಿಮ್ಮ ಉತ್ತರಕ್ಕೂ ಕಾಯದೇ ಒಳಗೆ ಬಂದು ಕುರ್ಚಿ ಮೇಲೆ ಕೂರುತ್ತಾರೆ. ಮೊದಲ್ನೇ ಧಾಂಡಿಗ ಬಾಯಿ ಬಿಡ್ತಾನೆ "ಸಾರ್ ಗಣೇಶನ್ನ ಕೂರ್ಸಿದೀವಿ, ನಿಮ್ಮ ಕಾಣಿಕೆ" ಅಂತ ಹಲ್ಲು ಕಿರೀತಾನೆ, ನಾಲ್ಕು ಜನ ಗಣೇಶರು ಆಗ್ಲೇ ಹೊಟ್ಟೆ ಬಿಟ್ಟು ಕೊಂಡು ಕೂತಿದೀರಲ್ಲವ್ವಾ ಅಂತ ಹೇಳುಕ್ಕೆ ನಿಮಗೆ ಧೈರ್ಯ ಇಲ್ಲ. ಶಕುನಾನ ಹಳಿದು ಏನು ಪ್ರಯೋಜನ.

ಸಂಜೆ ಆಫೀಸಿನಿಂದ ಮನೆಗೆ ಬರ್ತೀರ. ಹೊರಬಾಗಿಲಲ್ಲೇ ಅವರೇಕಾಳ ಉಪ್ಪಿಟ್ಟಿನ ಘಮ ಘಮ ಮೂಗಿಗೆ ಬಡಿಯುತ್ತೆ. ಆಹಾ ! ಅದೆಷ್ಟು ವೈಯಾರದಿಂದ ಪ್ರಿಂಟೆಡ್ ಸಿಲ್ಕ್ ಉಟ್ಟ ನಿಮ್ಮ ಪತ್ನಿ ನಿಮ್ಮನ್ನು ಇದಿರುಗೊಂಡು "ಉಪ್ಪಿಟ್ಟು ಬಿಸಿಯಾಗಿದೆ. ತಗೊಳಿ. ಕಾಫಿ ತರ್ತೀನೆ" ಅಂದಾಗ್ಲೇ ಮುಂಬರುವ ಅಪಾಯದ ಅರಿವು ನಿಮ್ಮ ಜ್ಞಾನ ಚಕ್ಷುಸಿಗೆ ಅರಿವಾಗುತ್ತೆ. ಉಪ್ಪಿಟ್ಟು ತಿನ್ನುತ್ತಾ ಇದ್ದಾಗ ಆಕೆ "ಇವತ್ತು ಬೆಳಗ್ಗೆ ಕೆ.ಇ.ಬಿ.ಗೆ ಬಿಲ್ಲು ಕಟ್ಟುಕ್ಕೆ ಹೋಗಿದ್ದೆ ರೀ. ದಾರೀಲಿ ಆ ಆಂಜನೇಯನ ಗುಡಿ ಹತ್ರ ಇರೋ ಪ್ರೇಯರ್ ಹಾಲಿನಲ್ಲಿ ರಿಯಾಯ್ತಿ ಮಾರಾಟ ಅಂತ ದೊಡ್ಡ ಬ್ಯಾನರ್ ಹಾಕಿದ್ರು. ಹೇಗಿದ್ರೂ ಕೆ.ಇ.ಬಿ. ಬಿಲ್ ಕಟ್ಟಕ್ಕೆ ಇನ್ನು ಒಂದು ವಾರ ಅವಧಿ ಇದೆಯಲ್ಲಾ ಅಂತ............ ಇನ್ನೂರು ರೂಪಾಯಿ ಚಟ್ಟು. ಶಕುವರ ಬಗ್ಗೆ ನಿಮ್ಮ ಅನಿಸಿಕೆ ಅಕ್ಷರಶಃ ನಿಜ.

ರಾತ್ರಿ ಒಂಭತ್ತು ಘಂಟೆ ಮೇಜಿನ ಮುಂದೆ ಕುಳಿತು, ನೀವು ತಿಂಗಳ ಲೆಕ್ಕ ಸರಿದೂಗಿಸಲು ಹೆಣಗಾಡ್ತಾ ಇದ್ದೀರ. ಮೆಲ್ಲಗೆ ನಿಮ್ಮ ಇಪ್ಪತ್ತು ವರ್ಷದ ಕಾಲೇಜ್ ಕುವರ ನಿಮ್ಮ ರೂಮಿಗೆ ಬರ್ತಾನೆ. ಎಂದಿನಂತೆ "ಹಾಯ್ ಡ್ಯಾಡಿ" ಇಲ್ಲ ಶಿಳ್ಳೆ ಇಲ್ಲ – ಉದ್ದವಾದ ಮುಖ – ನಿಮ್ಮ ಮುಂದೆ ನಿಂತು ತಲೆತಗ್ಗಿಸಿ "ಡ್ಯಾಡಿ, ನೀವು ಕೋಪಿಸಿ ಕೊಳ್ಳೋಲ್ಲಾ ಅಂತ ಭಾಷೆಕೊಡಿ" ಅಂತಾನೆ – ಶಕುನ ಯಾಕೋ ....

ಇದೆಲ್ಲಾ ನೋಡಿದರೆ ಹಿಂದಿನ ಕಾಲದ ಒಂಟಿ ಬ್ರಾಹ್ಮಣ, ಕ್ರಾಸ್ ಮಾಡೋ ಬೆಕ್ಕೇ ವಾಸಿ ಅನ್ನಿಸುತ್ತೆ ಅಲ್ವೇ !



"ಜಾತೀಯತೆ ಭೂತ ನನಗಿಂತ ದೊಡ್ಡದು, ಅದನ್ನ ಓಡ್ಸೊಕ್ಕೆ ನನ್ನಿಂದ ಸಾಧ್ಯ
ಇಲ್ಲ. ಇನ್ನೇನಾದ್ರೂ ಕೇಳು,"

ನಕ್ಕ್ಯಾಂವಾ ಗೆದ್ದ್ಯಾಂವಾ

" ಬಕ್ತರಾಧೀನ "

ಶೀನೂ

ನೇಕಾರ ನಿಂಗವ್ವನ ಮಗ ಶೂಪುತ್ರ (ಶಿವ+ಪುತ್ರ= ಶಿವಪುತ್ರ= ಶಿವ್ಪುತ್ರ = ಶೂಪುತ್ರ) ಒಂದ ಗುಟಕ ಸಹಿತ ಕುಡೀದನs 'ಸುದ್ದಿ' ವ್ಯಾಗ ಅದಾನ ಅಂದ್ರ ಇಡೀ ಶಿವಾಪೂರ ಹಳ್ಳಿಗೇನs ಏನೋ ಕೆಡಗಾಲ ಬಂದೈತಿ ಅಂತ ತಿಳಕೊಣ್ಣಾಕ ಹರಕತ್ತಿಲ್ಲ.

ಮುಂಜಾನೆ, ಮದ್ಯಾಣ ಸರಿಹೊತ್ತ ಸಂಜಿಗಂತೂ ಸೈಯ್ಯs ಸೈ, ಹಿಂಗ ಯಾವಾಗ ನೋಡಿದರ ಆವಾಗ ಮೂಗಿನ ಮಟ ಮಸ್ತ ಇರತಾನ ಶೂಪುತ್ರ.

ಪಾಪ. ಅವನ ತಾಯಿ ಮುದ್ಕಿ ನಿಂಗವ್ವ, ಮೂರು ದಿನದಿಂದ ಒಂದs ಸಮನs "ಯಪ್ಪಾ ಮಗನs ಸುಕ್ರ್ರರ ಗಣಪತಿ ಕಳಸೋದೈತಿ. ಗೋಕಾವಿ ಗಣಪತಿಗೆ ಹರಕಿಹೊತ್ತು ನಿನ್ನ ಹಡದೇನೋ ನನ ಮಗನss ಸುಕ್ರ್ಯಾರ ಒಂದಿವ್ಸ ಗಣಪತಿ ಕಳಿಸಿ ಬರೋ ಮಟ ಸಂಜಿಶನ ಅಷ್ಟು ಸುದ್ದೀ ವ್ಯಾಗ ಇರೋ ನನ ಮಗನs ...... ಅಂತ ವರಾತ ಹಚ್ಚಿದ್ದಲ್ಲದs ಊರ ಗೌಡರ ಕಡಿಂದ ಸಹಿತ ತಾಕೀದು ಮಾಡ್ಸಿದ್ದಳು.

ನೇಕಾರ ನಿಂಗವ್ವಗ ಎಷ್ಟೋ ದಿವ್ಸ ಮಕ್ಕಳ್s ಆಗಿದ್ದಿಲ್ಲ. ಆಕಿ ಗೋಕಾವಿ ಗಣಪತಿಗೆ ಹರಕಿ ಹೊತ್ತು. ಯೋಳು ಮಂಗಳವಾರ ಒಪ್ಪೊತ್ತು ಉಪಾಸ ಮಾಡಿ, ಒಳ್ಳೆ ಪಿರೋತಿಯಿಂದ ಮಗನ್ನ ಹಡೆದು, ಶೂಪುತ್ರ ಅಂತ ಗಣಪತಿ ಹೆಸರಲೇ ಕರದು, ಭಾಳs ಅಚ್ಚಿದಿಂದ ಬೆಳಿಸಿದ್ಲು. ಮಗ ಹುಟ್ಟಿದ ನಾಕ ವರಸಕ್ಕನೂ ತಲೇ ಹಿರ್ಯಾ ಸಿದ್ರಾಮು ಗೊಟಕ್ ಅಂದಿದ್ದ. ಆಗಿನ್ನೂ ಆಕಿ ಸಣ್ಣಾಕಿ. ಆದರೂ ಉಡಕೀ ಮಾಡಿಕೊಳ್ಳದ್ಯನs ಮನಸಿಟ್ಟು ಮಗನ್ನ ಬೆಳೆಸಿದ್ಲು. ಏನಾದರೇನು ? ಶೂ ಪುತ್ರ ಸಣ್ಣಂದಿರಶನs ಬಾಟ್ಲಿ ಪೂಜಿ ಸುರುಮಾಡಿದ್ದ. ಅವ್ವನ ಅಚ್ಚೆದಿಂದ ಕತ್ತೀ ಹಂಗ ಬೆಳೆದು ಊರತುಂಬ 'ಹೊಡೀs ಬಡೀs' ಮಾಡಿಕೊಂತ ಬಾಟ್ಲೀ ಸಂಗತಿ ಇನ್ನೂ ಏನೇನು ಸದಗುಣ ಬರಬೇಕೋ ಅವನ್ನೂ ಕಲಕೊಂಡು. ಇಡೀ ಶಿವಾಪೂರಕ್ಕs ತೆಲಿಬ್ಯಾನಿ ಆಗಿದ್ದ. ಊರಂತ ಊರಾಗ ಯಾವ ಸೋಳೆಮಗನ್ನೂ ಅವನ ತಂಟೇಕ್ಕ ಹೋಗೋ ತಾಕತ ಇರಲಿಲ್ಲ. ಇಲ್ಲಂದರೂ ಊರ ಗೌಡರಿಗೆ ಒಂದೀಟು ಹೆದರತಿದ್ದ.

ಅವತ್ತ ಸುಕ್ರ್ರಾರ, ಗೌಡರು ಕಣ್ಣ ತಗದದ್ಧಕ್ಯೋ ಇಲ್ಲ ಮುದ್ಕೀ ಕಿರಿಕಿರಿಗೋ ಅಂತೂ "ಗಣಪತಿನ್ನ ಕಳಿಸಿ ಬರೋಮಟ ಸುದ್ದೀ ವ್ಯಾಗ ಇರತೀನಂತ" ಶಪ್ಪತ್ ಮಾಡಿದ್ದ. ಹಂಗ ನೋಡಿದರ ಅವರ ಮನೀ ಗಣಪತಿ ಬಂದ್ಯ ದಿವ್ಸದ್ದು. ಮುಂಜಾನೆ ತಂದು ಮಂಟಪದಾಗ ಕುಂದ್ರಿಸಿ ಪೂಜಿಮಾಡಿ ಯಡೀ ತೋರಿಸಿ ಚಂಜೀಕೆ ಕಳಿಸಿ ಬಂದ್ರು ಆತು. ಪಾರೂರ ಗತೆ ದಹಾ ಬಾರ ದಿವ್ಸದ ಗಣಪತಿ ಇದ್ರ ಇಷ್ಟೊತ್ತಿಗೆ ಶೂ ಪುತ್ರ ಸತ್ತ್ಯ ಹೋಗಿರತಿದ್ದ.

ಅಂತೂ ಅವತ್ತ ಸುಕ್ರ್ರಾರ ಗಣಪತಿ ಹಬ್ಬದ ದಿವಸ ಶೂಪುತ್ರ ಮುಂಜಾಲಿಂದ ಸುದ್ದಿ ವ್ಯಾಗಿದ್ದ. ಮುಂಜಾಲೆ ನೆಲಕ್ಕೆ ಸಗಣೆ ಸಾರಿಸಿ, ಗ್ವಾಡಿಗಿ ಸುಣ್ಣ ಹೊಡೆದು ಹುರಮಂಜು ಬಳದು, ಮಾಡಾ ಸೊಚ್ಚಮಾಡಿ ಮಂಟಪ್ಪ ಮಾಡಿ, ಘರ ಘರೀ ಕಟ್ಟಿ ಗುಳಾಪ ಹಾಕಿ ಎಲ್ಲಾ ಆಗೂ ಮಟ ಅಂದ್ರ ಮದ್ಯಾಣ ಎರಡು ಹೊಡದಿತ್ತು. ಆವ್ಯಾಗ ಜಳಕಾ ಮುಗಿಸಿ ಪದ್ದತಿ ಪ್ರಕಾರ ಚಿತ್ರಗಾರ ಓಣಿಯಿಂದ ಬಣಗಾರ ಯಮನಪ್ಪನ ಮನಿಯಿಂದ ಗಣಪತಿ ತಂದು ಕೂಡ್ರಿಸಿ ಆಗಿತ್ತು. ಆವ್ಯಾಗ ಪೂಜಿ,

ಇಡೀ ಶಿವಾಪೂರದ ಊರಿಗೆ ಇರೋವ್ಯ ಎರಡ ಭಟ್ಟರ ಮನಿ. ಮೂಲಿ ಮನಿ ರಾಮ್‌ಭಟ್ಟ ಮತ್ತೆ ಜೊಯ್ಸರ ಅಂತಂಭಟ್ಟ ಭಟ್ಟ ನನಮಕ್ಕಳಿಗೆ ಹಿಂತಾ ಟೈಂ ದಾಗs ಡಿಮಾಂಡ ಭಾಳ. ಹತ್ತ ಸರೇ ಎಡತಾಕಿದ ವ್ಯಾಗ ಕಡೀಕ ಸಂಜೀ ನಾಕ ಘಂಟೇಕ್ಕ ಅಂತಂಭಟ್ಟ ಬಂದು ಪೂಜಿ ಮುಗಿಸಿ ಹೋಗಿದ್ದ· ಪೂಜಿಗೆ ಬಂದಾಗ ನಿಂಗವ್ವಗ "ನಿಂಗವ್ವಾ ಸಂಜೀಮುಂದ ಊರತುಂಬ ಗಣಪತಿ ವಿಸರ್ಜನ ಅವ. ಇನ್ನೊಮ್ಮೆ ಮತ್ತ ಬರಲಿಕ್ಕೆ ಆಗೋದಿಲ್ಲ. ಅದಕ್ಕs ಈಗs ನಿಮ್ಮನೀ ಗಣಪತಿದು, ಪ್ರತಿಷ್ಠಾಪನದ್ದೂ ಮತ್ತೂ ವಿಸರ್ಜನದ್ದೂ ಎರಡೂ ಮುಗಿಸಿ ಬಿಡತೇನಿ. ಅಂತ್ಹೇಳಿ ಕುಂದ್ರಸೂದು ಕಳಸೂದು ಎರಡೂ ದಕ್ಷಿಣೆ ಟೊಂಕಕ್ಕ ಸಿಗಿಸಿಕೊಂಡ ಚುನಮರಿ, ಕೊಬ್ಬರಿ, ಬತ್ತಾಸ ಹಣ್ಣು ಹಿಂಗ ಎಲ್ಲಾ ಕಜ್ಜಾಯದ ಸಾಮಾನೂ ಗಣಪತಿ ಮುಂದ ಆಯಿದು ಆಯಿದು ಗುಂಪು ಮಾಡಿ ಇಡಿಸಿ ಅವ್ಯಾಗ ಬಳಕೊಂಡು ಎಲ್ಲಾ ತನ್ನಗಂಟನ್ಯಾಗs ತುಂಬಿಕೊಂಡ.

ದೇವರ ಆಟ ಯಿಚಿತ್ರ. ಎಲ್ಲಾ ಕಜ್ಜಾಯನೂ ಕಡೀಕ ಬಳಕೊಂಡು ಭಟ್ಟರ ಗಂಟನ್ಯಾಗ ತುಂಬಸೂದಿದ್ರ ಮತ್ಲ ಆಯಿದ ಆಯಿದ ಗುಂಪು ಯಾಕ ಮಾಡಬೇಕೋ ?

ಅಂತೂ ನಾಕ ಘಂಟೇಕ್ಕ ಪೂಜಿ ಮುಗಿಯೋ ಹೊತ್ತಿಗೆ ಶೂಪುತ್ರ ಹೈರಾಣಾಗಿದ್ದ. ಗಂಟಲು ಒಣಗಾಕ ಹತ್ತಿತ್ತು. ಕೈಕಾಲು ನಡಗಾಕ ಹತ್ತಿದ್ವೊ. ಕಣ್ಣಿಗೆ ಬವಳಿ ಬಂದಂಗಾಗಾಕ ಹತ್ತಿತ್ತು. ಪಾಪ ಅವನರ ಏನು ಮಾಡ್ಯಾನು ? ಮುದಿಕೀ ಕಣ್ಣ ತಪ್ಪಿಸಿ ಹಿತ್ತಲ್ಲಾಗ ಹೋಗಿ ಒಂದೆರಡು ಗುಟುಕು ಹಾಕ್ಕೊಂಡು ಬಂದ. ಆವ್ಯಾಗs ಒಂದೀಟು ಸಮಾ ನಡಿಯಾಕ ಬಂತು.

ಗಣಪತಿಗೆ ಸಣಮಾಡಿ ಉಣ್ಣಾಕ ಕುಂತ. ನಿಂಗವ್ವ ಅಂಬ್ರಾ ತರಾಕ ಒಳಗ ಹೋದಾಗ ಕುಡಿಯೋ ನೀರಿನ ಲೋಟಾದಾಗ ಒಂದ್ನಾಕು ಗುಟುಕು ಬೆರಕೀ ಮಾಡಿಕೊಂಡ, ಊಟ ಮುಗಿದು ಗಂಗಾಳದಾಗ ಕೈ ತೊಳಕೊಂಬೋ ಮುಂದ ಅವ್ವನ ಕಣ್ಣು ತಪ್ಪಿಸಿ ಅದರಾಗsನs ಇನ್ನೊಂದ್ನಾಕು ಗುಟುಕು ಹಾಕಿ ಎತ್ತಿ ಕುಡಿದು ಬಿಟ್ಟ. ಎಲ್ಲಾ ಮುಗದು ಕಟ್ಟಿವ್ಯಾಗ ಕುಂತು ಎರಡು ಬೀಡಿ ಸೇದೋ ಮಟ ಆದರ ಶೂಪುತ್ರ ದಿನಧಾಂಗ ಮನಿಶಾ ಆಗಿದ್ದ,

ಅಷ್ಟೊತ್ತಿಗೆ ಸಂಜಿ ಆಗಿ ಕವನೆಳ್ಳು ಆಗಾಕ ಸುರುಆತು. ಕತ್ತಲ್ಯಾಗ ಮುದಿಕಿಗೆ ಕಣ್ಣ ಕಾಣೂದುಲ್ಲ. ಹಿಂಗಾಗಿ ಶೂಪುತ್ರ ಮತ್ತೊಂದೆರಡು ಗುಟುಕ ಹಾಕ್ಕೊಂಡು, ಹುಡಗೂರ ವ್ಯಾಳಾ ಕೂಡಿಸಿಕೊಂಡು ಗಣಪತಿ ಕಳಸಾಕ ತಯಾರಾದ.

ಶಿವಾಪೂರ ಮಂದಿ ಎಂದಿನಗತೇನ ಕಂದೀಲ, ಗ್ಯಾಸ್ ಲೈಟು ಉರಿಸಿಕೊಂತ ಮದ್ದು ಪಟಾಕಿ ಹಾರಿಸಿಕೊಂತ ಘಂಟಿ ಬಾರಿಸಿಕೊಂತ, ಭಜನೀ ಪದ ಹಾಡಿ ಕೊಂತ ಊರ ಮುಂದಲ ಪತ್ರಾರ ಭಾವಿಗೆ ತಮ್ಮ ತಮ್ಮ ಮನೀ ಗಣಪತಿ ಕಳ ಸಾಕ ಹತ್ತಿದರು. ನಿಂಗವ್ವ ಹತ್ತು ಸರೆ ತಾಕೀತು ಮಾಡಿದ ವ್ಯಾಲೆ ಶೂಪುತ್ರ ಇನ್ನೊಂವೆರಡು ಗುಟುಕ ಹಾಕ್ಕೊಂಡು ಓಣ್ಯಾಗಿನ ಹುಡುಗೂರನ ಗೋಳಾಯಿಸಿ ಕೊಂಡು ಗಣವತಿ ಕಳಸಾಕ ಹೊಂಟ. ಶೂಪುತ್ರನ ಮನೀ ಗಣಪತಿ ಕಳಸೋ ದಂದ್ರ ಊರಾಗಿನ ಹುಡುಗರಿಗೂ ಖುಷಿನೋ ಖುಷಿ. ಯಾಕಂದ್ರ ಶೂಪುತ್ರ ಹುಡುಗೂರಿಗೆಲ್ಲ ಕೇಳಿದಷ್ಟು ಪಟಾಕಿ, ಚುರಮುರಿ ಕೊಡತಾನ. ದೊಡ್ಡೋರ ಮನಿಯವರ ಗತೆ ಈಟೀಟs ಕೊಡೋದುಲ್ಲ

ಎಡಗೈಯಾಗ ಕಂದೀಲು ಬಲಗೈಯಾಗ ಗಣಪತಿ ಹಿಡಕೊಂಡು "ಗಣಪತಿ ಗಣವತಿ ಮೋರಾಯ" ಅಂತ ಗೊಗ್ಗರ ದನಿಲೇ ಒದರಿಕೋತ ಶೂಪುತ್ರ ಹೊರ ಬಿದ್ದ. ಅವನ ಹಿಂಬಾಲೆ ಹುಡಗೂರು ಬಿದ್ದಕೊಂತ ಎದ್ದಕೊಂತ ಚೀರ್ಯಾಡಿಕೊಂತ ಒದರ್ಯಾಡಿಕೊಂತ ಚುನಮುರಿ ಮುಕ್ಕೋತ ಪಟಾಕಿ ಹಾರಿಸಿಕೋತ ಹೊಂಟೂ.

ಶೂಪುತ್ರ ಓಣ್ಯಾಗ ಒಬ್ಬರ ಮನಿ ಕಟ್ಟೀ ಮ್ಯಾಗ ಕಂದಿಲೂ ಗಣಪತಿ ಇಟ್ಟು ಕಿಲೆದಾಗಿನ ಬಾಟ್ಲಿ ತಗದು ಎರಡು ಗುಟುಕು ಹಾಕಿ, ಒಂದು ಬೀಡಿ, ಹಚ್ಚಿ ಮತ್ತ ಕಂದೀಲ ಗಣಪತಿ ಹಿಡಕೊಂಡು ಹೊಂಟ. ಎಡಗೈಯಾಗ ಕಂದೀಲು ಮತ್ತ ಬೀಡಿ, ಬಲಗೈಯಾಗ ಗಣಪತಿ ಕಡ್ಡೀ ಪೆಟ್ಟಿಗಿ; ಹೆಜ್ಜಿ ಒಮ್ಮೆ ಎಡಕ ಒಮ್ಮೆ ಬಲಕ ಬಿದ್ದರ ಒಮ್ಮೆ ಹಿಂದs ಇನ್ನೊಮ್ಮೆ ಮುಂದ. ಸಣ್ಣ ಸ್ವಾಮಾರ ಉಳಿವಿ ಬಸಪ್ಪನ ಜಾತ್ರಿಗಿ ಹೊಂಟಾಗ ಜಂಗ ಕುಣೀತಾರಲ್ಲ ಹಂಗ. ನಡನಡಕ "ಗಣಪತಿ ಗಣಪತಿ ಮೋರಾಯಾ" ಶೂಪುತ್ರ ಒದರೂತಲೇ ಹುಡುಗೂರು ಒದರತಿದ್ದವು. ಹುಡುಗೂರು ಒದರೂ-ತಲೇ ಶೂಪುತ್ರ ಒದರತಿದ್ದ ಹುಡಗೂರು ಕೇಕಿ ಹಾಕಿ ಜೀಗಿಯೂತಲೇ ಶೂಪುತ್ರ ಜೀಗಿತಿದ್ದ. ಶೂಪುತ್ರ ಕುಣಿಯೂತಲೇ ಹುಡಗೂರು ಕುಣೀತಿದ್ರೂ. ಈ ಛಂದದಲೇ ಹೊಂಟತ್ತು ಹುಚ್ಚಪ್ಪನ ತೇರು.

ಪತ್ರಾರ ಭಾವಿ ಇನ್ನೊಂದು ಹತ್ತು ಹೆಜ್ಜಿ ಆಯ್ತು ಅನ್ನೊಮುಂದ ಅಳ್ಳೀ ಗಿಡದ ಹಂತ್ಯಾಕ ಶೂಪುತ್ರಗ ಒಂದಕ್ಕ ಒತ್ತರಾತು ಪಾಪ ! ಏನ ಮಾಡ್ಯಾನು ? ಕೈಯಾಗಿನ ಕಂದೀಲs ಮತ್ತು ಗಣಪತಿ ಹುಡಗೂರ ಕೈಯಾಗ ಕೊಟ್ಟು ಅಳ್ಳೀಗಿ-ಡದ ಬಡ್ಡಿಗೆ ಕುಂತ.

ಹಾರೂರ ಮನೀ ಗಣಪತಿ ಆಗಿದ್ರ ಏನ ಡೌಲ ಮಾಡತಾರು, ಏನ ಮಡಿ ಅಂತಾರು, ಧೂರ ಸಿಂದರ್ರಿss.... ಹಿಂದ ಸರೀರಿss... ಗಣಪತಿಗೆ ಕೈಹಚ್ಚಬ್ಯಾಡ್ರಿ ಮೂರತಿ ಮುಕ್ಕ ಆಗಬಾರದು... ಯಿಗ್ನs... ಛೀ ಛೀ ಒಂದs ಎರಡs ? ಆದರ ಶೂಪುತ್ರನ ಗಣಪತಿ ಹಾಂಗಲ್ಲ. ಚಂದ್ರಹಾಸನ ಗತಿ ಎತಿಗೊಂಡವರ ಕೈ ಕೂಸು ಹುಡಗೂರು ಗಣಪತಿ ಕೀರಿಟ, ಸೊಂಡೀ, ಹೊಟ್ಟಿ ಇಲಿ ಯಲ್ಲಾನು ಮುಟ್ಟಿ ಮುಟ್ಟಿ ನೋಡಿಕೊಂತ ಗಣಗತಿ ಗಣಪತಿ ಮೊರಾಯಾss ಪುಂಡೀ ಪಲ್ಲಿ ಸೋರಾಯಾ" ಅಂತ ಚೀರಾಡ್ಯಾಕ ಹತ್ತಿದರು. ಗಣಪತಿ ಪಾಪ, ಸಣ್ಣ ಮೋತಿ ಮಾಡಿಕೊಂಡ ಒದ್ಯಾಡಿಕೊಂತ ಕುಂತಿದ್ದ.

ಎಷ್ಟೋ ಹೊತ್ತಾದ ಮ್ಯಾಗ ಶೂಪುತ್ರ ಎದ್ದ. ಏಳೂ ಮುಂದ ಮುಂಯ್ಯೋಲಿ ಹೋಗಿ ಅಳ್ಳೀಗಿಡದ ಬಡ್ಡಿಗೆ ತೇಲಿ ಬಡೀತು. ಆದರೂ ಸುದಾರಿಸಿಕೊಂಡು ಎದ್ದು ಇನ್ನೊಂದು ಬೀಡಿ ಹಚ್ಚಕೊಂಡು; ಹುಡಗೂರ ಕೈಯಾಗಿನ ಕಂದೀಲ ಮತ್ತ ಗಣಪತಿ ಇಸಗೊಂಡು ಜೋಲಿ ಹೋಡಕೋತ ಹೊಂಟ ಅಷ್ಟರಾಗs ಬೀಡಿ ಆರಿಹೋಗಿತ್ತು, ಒಳಗ ತಂಬಾಕನ, ತುಂಬಿದ್ದಿಲ್ಲ ಸಮಾತನ್ಯಾಗಿ. 'ಇವನಾಪನ' ಆಂದ 'ಥೂ' ಆಂದ ಕ್ಯಾತರಿಸಿ ಉಗಳಿ ಇನ್ನೊಂದು ಬೀಡಿ ಹಚ್ಚಿದ. ಇದs ಯಾಳೇ ಅಂದಕೊಂಡು ಗಣಪತಿನ್ನ ಎಡಗಡೆ ಬಗಲಾಗ ಘಟ್ಟಿ ಇಟಕೊಂಡ ಬಲಗೈಲೇ ಬಾಟ್ಲೀ ತಗದು ಇನ್ನೊಂದು ಗುಟುಕು ಹಾಕಿದ,

ಬಾವಿವ್ಯಾಗ ಯಾರೂ ಇದ್ದಿದ್ದಿಲ್ಲ. ಇದ್ದ ಒಬ್ಬಬ್ಬರು ಸಹಿತ ಶೂಪುತ್ರನ್ನ, ಅವನ ಮಂಗ್ಯಾನಂತಹ ಹುಡಗೂರನ ನೋಡಿ ಜಾಗಾ ಖಾಲಿಮಾಡಿ ದೂರ ಸರದು ನಿಂತರು.

ಶೂಪುತ್ರ ಬಾವೀಕಟ್ಟೀ ಹತ್ತಿದ, ಈಗ ಕಂದೀಲ ಗಣಪತಿ ಯಾಡ್ಗೂ ಅವನ ಎಡಗೈಯಾಗ ಬಂದಿದ್ದೂ, ಬಲಗೈಯಾಗ ಬರೀ ಒಂದು ಹಚ್ಚಿದ ಬೀಡಿ, ಒಂದು ಬೀಡಿ ಕಟ್ಟು, ಕಡ್ಡಿಪೆಟಗ ಇಷ್ಟs ಇದ್ದೂ, ಶೂಪುತ್ರ ಬಾವ್ಯಾಗ ಬಗ್ಗಿ ಹಣಿಕಿ ಹಾಕಿ ನೋಡಿದ, ತಲಿ ತಿರಗಾಕ ಹತ್ತ್ಯು, ದೂರ ದೂರ ಆಳದಾಗ ಕತ್ತಲದಾಗ ಕರ ಕರೆ ನೀರಿನ ತೆರಿ ಹೊಳೀತಿದ್ದೂ.

ಪದ್ಧತಿ ಪ್ರಕಾರ ಶೂಪುತ್ರ ಗಣಪತಿ ಕಂದೀಲ ಎಡ್ಡೂ ಬಾವಿ ದಂಡಿವ್ಯಾಗ ಗಡಗಡೆದ ಕೆಳಗ ಇಟ್ಟ, ಕಂದೀಲದ ಬಾಜೂಕsನ ಬೀಡಿ ಬಂಡಲ್ಲು ಕಡ್ಡೀ–ಪೆಟಿಗಿ ಇಟ್ಟು ಕೈ ಖಾಲಿ ಮಾಡಿಕೊಂಡು, ಚುನಮುರಿ ಖಾರದಾಣಿ ಕಜ್ಜಾಯ ಎಲ್ಲಾ ಸಣ್ಣ ಸಣ್ಣ ಗುಂಪಮಾಡಿ ಗಣಪತಿ ಮುಂದ ಇಟ್ಟ.

ವರಸಾ ಮಾಡೂ ಹಂಗsನs ಹುಡುಗುರು ಮೂರ ಸಲೆ "ಗಣಪತಿ, ಗಣಪತಿ ಮೋರಾಯಾ" ಅಂತ ಒದರಾಕ ಚಾಲೂ ಮಾಡಿದರು. ಒಂದಾತು, ಎರಡಾತು, ಮೂರನೇ ಸರ್ತಿ ಪಟಾಕಿ, ಗರ್ನಾಲು, ಧಡಲ್‌ಬಾಜಿ ಘಂಟೆ ಡಬ್ಬಿ ಬಾರಸೂದು ಎಲ್ಲಾ ಮಾಡಿಕೋತ, ಮುಗಲ ಹರದ ಬೀಳವರಗೆತೆ "ಗಣಪತಿ, ಗಣಪತಿ ಮೋರಾಯಾ" ಅಂತ ಒದರಿಕೊಂಡೂ.

ಅದs ಟೇಮಕ್ಕೆ ಶೂಪುತ್ರ ಅತ್ಯಂತ ಬಯು ಬಕ್‌ತಿಯಿಂದ ತಲಿ ಬಗ್ಗಿಸಿಕೊಂಡು ಬೀಡೀ ಕಟ್ಟಿಗೆ ನಮಸ್ಕಾರ ಮಾಡಿ. ಕಂದೀಲ ಭಾವ್ಯಾಗ ಚಲ್ಲಿ ಗಣಪತಿನ್ನ ಕೈಯಾಗ ಹಿಡಕೊಂಡ ಬೀಸಿಕೊಂತ ಮನಿಗೆ ಹೊಂಟ.

ಕಟಿಣ ಸಬ್ದಾರ್ತ	ಕಠಿಣ ಶಬ್ದಾರ್ಥ
ಸುದ್ದಿಮ್ಯಾಗ ಅದಾನ	ಶುದ್ಧಿಯ ಮೇಲಿದ್ದಾನೆ. ಎಚ್ಚರದಲ್ಲಿದ್ದಾನೆ,
ಸುಕ್ರಾರಾ	ಶುಕ್ರವಾರ
ವರಾತ	ಆಗ್ರಹ
ತಾಕೀದು	ಎಚ್ಚರ ಹೇಳುವಿಕೆ
ಅಚ್ಚ	ಅತಿಯಾದ ಪ್ರೀತಿ (ಉದಾ: ಅಚ್ಚಿದಿಂದ ಮಕ್ಕಳು ಕೆಡತಾವು)
ಹಿರ್ಯಾ	ಹಿರಿಯ-ಯಜಮಾನ (ಗ್ರಾಮ್ಯಭಾಷೆಯಲ್ಲಿ ಗಂಡ)
ಗೊಟಿಕ್ ಅಂದ	ಸತ್ತ, ತೀರಿಕೊಂಡ
ಉಡಿಕೆ	ಪುನರ್ವಿವಾಹ
ಶಪ್ಪತ್	ಶಪಥ, ಆಣೆ
ಯಡೀಲೋರಿಸು -	ಎಡೆ ಲೋರಿಸು. ನೈವೇದ್ಯಮಾಡು
ಚಂಜೆ	ಸಂಜೆ
ದಹಾಬಾರಾ	ಹತ್ತು, ಹನ್ನೆರಡು
ಹುರಮಂಜು	ಕಪ್ಪು ಮಿಶ್ರಿತ ಕೆಂಪು ಬಣ್ಣ
ಕಜ್ಜಾಯ	ಪ್ರಸಾದ
ಯಿಚಿತ್ರ	ವಿಚಿತ್ರ
ಚುರಮಾರಿ	ಚುನಮುರಿ, ಕಳ್ಳೆಪುರಿ
ಕಣ್ಣಿಗೆ ಬವಳಿಬರುವದು	ತಲೆ ಸುತ್ತಿ ಬರುವದು
ಸಣಮಾಡಿ	ಶರಣುಮಾಡಿ. ನಮಸ್ಕಾರಮಾಡಿ
ಅಂಬ್ರ	ಸಾಂಬಾರ, ಸಾರು, ಹುಳಿ
ಬೆರಿಕೆ	ಒಂದರೊಳಗೊಂದು ಕೂಡಿಸಿದ್ದು ಬೆರೆಸಿದ್ದು
ಮಟ	ತನಕ (ಉದಾ: ಆಗೂಮಟ, ಆಗುವ ತನಕ)
ಗೋಳಾಯಿಸಿ	ಕೂಡಿಸಿ
ಈಟೀಟ	ಇಷ್ಟಿಷ್ಟೆ
ಕಂದೀಲು	ಲಾಟೀನು (Lantern) ಚಿಮಣಿ ಎಣ್ಣೆಯ ದೀಪ
ಸಣಸ್ವಾಮೊರ	ಶ್ರಾವಣ ಸೋಮವಾರ
ಜಂಗ ಕುಣಿಯುವದು	ಒಂದು ತರದ ಜಾನಪದ ಕುಣಿತ
ಒತ್ತರಾತು	ಅವಸರಾತು ಉದಾ: ಒಂದಕ್ಕೆ ಒತ್ತರಾತು (ಅವಸರಾತು)
ಮುಕ್ಕ	ಮುಕ್ಕಾಗುವಿಕೆ, ಭಗ್ನವಾಗುವಿಕೆ
ಯಿಗ್ನ	ವಿಘ್ನ.

ಕಾಣೆಯಾಗುವ ಸಮಾಚಾರ

ರಾಮಿ

ಪ್ರಾಣೇಶನ ಜೊತೆಗೆ ಅವನ ಮಗನ ಹೊಸ ಫ್ಲಾಟು ನೋಡೋದಕ್ಕೆ ಹೋಗಿದ್ದ. ಫ್ಲಾಟು ಚನ್ನಾಗಿಯೇ ಇತ್ತು.

ಆದರೆ ಮಕ್ಕಳು ಮರಿ ಆಡಿಕೊಳ್ಳೋದಕ್ಕೆ ಮುದುಕರಿಗೆ ಕೈ ಕಾಲು ಆಡಿಸೋದಕ್ಕೆ ಹತ್ತಿರದಲ್ಲಿ ಒಂದಷ್ಟು ಜಾಗ ಇಲ್ಲವಲ್ಲ ಅಂತ ಆಕ್ಷೇಪ ಪ್ರಾಣೇಶನದು.

ಜಾಗ ಇತ್ತು ಆದರೆ ಕಟ್ಟಡ ಬೆಳೀತಾ ಬೆಳೀತಾ ಆ ಜಾಗನಾ ಕಬಳಿಸಿಬಿಡ್ತು ಅಂತ ಸಬೂಬು ನೀಡಿದ ಮಗರಾಯ.

'ಕಾಣೆಯಾಯ್ತು ಅನ್ನು' ಅಂತ ಸೇರಿಸಿದ ಪ್ರಾಣೇಶ.

ನೀಲಿ ನಕಾಶೆಯಲ್ಲಿ ಕಟ್ಟಡಕ್ಕೆ ಹೊಂದಿಕೊಂಡು ಕೊಂಚ ಜಾಗ ಇರುತ್ತೆ ಮಕ್ಕಳಿಗೆ ಆಡೋದಕ್ಕೆ. ಕಟ್ಟಡ ಪೂರ್ತಿಯಾಗುವಾಗ ಆ ಜಾಗ ಕಾಣೆಯಾಗಿ ಬಿಟ್ಟಿರುತ್ತೆ ಬಿಲ್ಡರುಗಳ ಮಾಯಾಜಾಲದಿಂದ. ಎಲ್ಲಾ ಕಡೆಗಳಲ್ಲಿಯೂ ಹಾಗೇನೆ. ಮುಂಬಯಿಯಲ್ಲಿ ಫ್ಲಾಟುಗಳವರು ಚಳುವಳಿಯನ್ನೇ ಪ್ರಾರಂಭಿಸಿದ್ದಾರೆ. ಆಟದ ಬಯಲು ಕಾಣೆಯಾಗುವುದರ ವಿರುದ್ಧ.

ಆಟದ ಬಯಲುಗಳು ಕಾಣೆಯಾಗೋದು ಬಹುಮಾಳಿಗೆ ಕಟ್ಟಡಗಳ ಸಂದರ್ಭದಲ್ಲಿ ಮಾತ್ರವಲ್ಲ. ಎಲ್ಲ ಪಟ್ಟಣಗಳಲ್ಲಿ ಮಹಾನಗರಗಳಲ್ಲಿ ಅವು ಇದ್ದಕ್ಕಿದ್ದಂತೆ ಕಿರಿದಾಗುತ್ತಾ ಹೋಗಿ ಕೊನೇಗೊಂದು ದಿನ ಕಾಣೆಯಾಗಿಬಿಡುತ್ತವೆ. ಗ್ರಾಮಾಂತರಗಳಲ್ಲಿ ಕೂಡ ಈ ಪವಾಡ ಇದ್ದದ್ದೇ ಅಲ್ಲಿ ಅವು ಯಾವ ಮಾಯದಿಂದಲೊ ಸ್ಕೂಲಿನವರ ಕೈತಪ್ಪಿ ಪ್ರಭಾವಿಗಳ ತೆಂಗಿನ ತೋಟಗಳಾಗಿ ಬಿಡೊದಿದೆ!

ಆಟದ ಬಯಲುಗಳೇನು, ಕೆರೆ ಬಾವಿಗಳೂ ಕೂಡ ಹಾಗೇನೆ, ಕಾಣೆಯಾಗಿ ಬಿಡುತ್ತದೆ. ಬೆಂಗಳೂರಿನಲ್ಲಿಯೇ ಇತ್ತೀಚಿನ ದಶಕಗಳಲ್ಲಿ ಎಷ್ಟೊಂದು ಕೆರೆಗಳು ಕಾಣೆಯಾಗಿಲ್ಲ ! ರೈಲ್ವೆ ಸ್ಟೇಶನ್ನಿನಿಂದ ಸುಭಾಸ್ ನಗರ ಬಸ್‌ಸ್ಟಾಂಡಿಗೆ ಹೆಜ್ಜೆ ಹಾಕುವಾಗಲೇ ಬಾಲ್ಯದಲ್ಲಿ ತಂಪು ಬೀರುತ್ತಿದ್ದ ಧರ್ಮಾಂಬುಧಿ ಕೆರೆ ಜ್ಞಾಪಕಕ್ಕೆ ಬರುತ್ತೆ. ಅದು ಹ್ಯಾಗಿತ್ತು ಅನ್ನೋದಕ್ಕೆ ಕೆ. ವಿ. ಅಯ್ಯರ್ ಅವರ ಅಪಾಡ ಬಹುಳ ಅಮಾವಾಸ್ಯೆ ಓದಿಕೊಳ್ಳಿ. ಅದರಲ್ಲಿ ಆ ಕೆರೆಯ ವರ್ಣನೆ ಬರುತ್ತೆ. ಈಗ ಆ ಜಾಗದಲ್ಲೆಲ್ಲ ಬುಸುಗುಟ್ಟುವ ಬಸ್ಸುಗಳ ರಾಜ್ಯ.

ಆಕ್ರಮಣದಿಂದ ಕಾಣೆಯಾಗುವುದು ಒಂದು ಮಾದರಿಯಾದರೆ ಕಾಗದ ದಲ್ಲಿ ಲೆಕ್ಕಕ್ಕಿದ್ದು ಹುಡುಕಿದರೆ ಸಿಗದೆ ಹೋಗುವ ಕೆರೆ ಬಾವಿಗಳೂ ಇವೆ. ಎಷ್ಟಾ ದರೂ ಅಭಿವೃದ್ಧಿ ಶೀಲ ರಾಷ್ಟ್ರ ! ಕಾಗದದಲ್ಲಿ ಅಸ್ತಿತ್ವದಲ್ಲಿದ್ದು ಹುಡುಕುವವರ ಮಟ್ಟಿಗೆ ಕಾಣೆಯಾಗುವ ಪವಾಡದ ಸಮಾಚಾರ ವಿವರಿಸ ಬೇಕಾಗಿಲ್ಲವಲ್ಲ !

ಮಕ್ಕಳು ಮರಿ ಹೆಮ್ಮಕ್ಕಳು, ಇಳಿ ವಯಸ್ಸಿನವರು ಕಾಣೆಯಾಗುವು ದಂತೂ ದಿನ ದಿನದ ಸಮಾಚಾರ. ಹಾಗೆಯೇ ಕಾಣೆಯಾಗುತ್ತಿರುವ ಕಾರು, ಲಾರಿ ಸೈಕಲ್, ಬೈಕ್ ಮೊದಲಾದ ಶಕಟ ವಿಶೇಷಗಳು.

ಮೊನ್ನೆ ಕರ ಸೇವೆಗೆ ಅಯೋಧ್ಯೆಗೆ ಹೋಗಿದ್ದ ತಿಪ್ಪಯ್ಯ ವಾಪಸಾದ. ಪರಾಕ್ರಮ ಕೊಚ್ಚುತ್ತಾ ಮಾತಿಗೆ ತಾನು ಹೋಗುವಷ್ಟರಲ್ಲಿ ಮಸೀದಿ ಕಾಣೆ ಯಾಗಿತ್ತು. ಎಂದ

'ಅದು ಹ್ಯಾಗಯ್ಯಾ ಎಂದು ಕೇಳಿದೆ, ಮಾಯವಾಗಿ ಬಿಟ್ಟಿತು, ಎಂದ ಮತ್ತೆ ಗಂಭೀರವಾಗಿ.

ಐವತ್ತು ವರ್ಷಗಗಳ ನಂತರ ತಯಾರಾಗುವ ಅಯೋಧ್ಯಾ ಮಹಾತ್ಮೆ ಸಿನಿಮಾದಲ್ಲಿ ಮಸೀದಿಕಟ್ಟಡ ಮೇಲಕ್ಕೆರುತ್ತಾ ಆಕಾಶದಲ್ಲಿ ತೇಲಿ ಹೋದ್ದನ್ನು ತೋರಿಸ್ತಾರೋ ಏನೋ. ಆದರೆ ಈವಾಗಲೆ ಪವಾಡ ಅನ್ನೋ ರೀತಿಯಲ್ಲಿ 'ಕಾಣೆಯಾಗಿತ್ತು ಅಂದರೆ ಹ್ಯಾಗೋ ಅನಿಸಿತು.

ಆದರೆ ಏನೂ ಹೇಳಲಿಲ್ಲ. ತಿಪ್ಪಯ್ಯನ ಕೈ ಜೋಳಿಗೆಯಲ್ಲಿ ತ್ರಿಶೂಲ ಇದೆ ಅಂತಾರೆ !

ಟಿ. ವಿ. ಕೋಮಾ

ಶಾಂತ ರಘು

ಸ್ಸಂಜೆ ಏಡುವಾಗಿತ್ತು. "ನಡೀ ! ಶೀನಿ ಮನೇಗಾದ್ರೂ ಹೋಗೋಣ. ಭಾಳದಿವ್ಸ ಆಗೋಯ್ತು, ಕಾದು ಹರಟೆ ಹೊಡ್ದು !" ಅಂದ್ರು ಯಜಮಾನರು. ಶೀನಿ ಇವರ ಚಡ್ಡಿ ದೋಸ್ತ್.

ಅವರ ಮನೆ ಮುಂಬಾಗಿಲು ತೆಗೆದೇ ಇತ್ತು. ಟಿ. ವಿ. ಆನ್ ಆಗಿತ್ತು, ನೋಡ್ತಾ ಕೂತಿದ್ದ ಶೀನಿಗೆ ನಮ್ಮ ಗುರುತು ಸಿಕ್ಕಿದ ಹಾಗೆ ಕಾಣ್ಲಿಲ್ಲ.

"ಶೀನೀ ! ಶೀನೀ ! ನಾನು ಕಣೋ ! ಯಾಕೋ ಹೀಗಿದೀಯಾ ? ಅಂತ ಇವರು ವಿಚಾರಿಸಿದ್ರು. ಉತ್ತರ – ಒಂದು ಬ್ಲಾಂಕ್ ನೋಟ – ಮತ್ತೆ ಯಥಾ ಪ್ರಕಾರ ಟಿ. ವಿ. ಕಡೆ ನೆಟ್ಟ ನೋಟ.

ಶೀನಿ ಹೆಂಡತಿ ಕಮಲ ಒಳಗಿಂದ ಬಂದ್ಲು. "ಬನ್ನಿ ! ಬಾ ಶಾಂತ ! ಏನೂ ತಿಳ್ಕೋಬೇಡಿ ! ಟಿ, ವಿ. ಮುಂದೆ ಕೂತಿದ್ರೆ ಇವ್ರು ಹೀಗೇ ! ಒಂಥರಾ ಮಂಕು ಬಡ್ಕೊಳ್ಳುತ್ತೆ ! ಕೋಮಾ ಅಂತಾರಲ್ಲ – ಹಾಗೆ ! ಈಗ ಇಂಡಿಯಾ, ದಕ್ಷಿಣ ಆಫ್ರಿಕಾ ಒನ್ ಡೇ ಕ್ರಿಕೆಟ್ ಬೇರೆ ಬರ್‍ತಾಯಿದೆ ! ಊಟ, ತಿಂಡಿ ಎಲ್ಲಾ ಟಿ, ವಿ. ಮುಂದೇನೇ!" ಅಂದ್ಲು,

ಕೂತ್ವಿ. "ಯಾಕೋ ಶೀನಿ ? ಯಾವಾಗಿಂದ ಹೀಗೆ ಟಿ. ವಿ. ಮೇನಿಯಾಕ್ ಆದೆ ? " ಅಂದ್ರು ನಮ್ಮವರು. ಶೀನಿಯೋ ಪ್ರಾಣಸಂಕಟ ಪಡ್ತಾ "ಹಯ್ಯೋ ! ನಮ್ಮ ಕ್ಯಾಪ್ಟನ್‌ಗೆ ಏನೇನೂ ಸಾಲ್ದು ! ತೆಂಡೂಲ್ಕರ್‌ನ ಯಾಕೆ ಓಪನರ್‌ಗೆ ಬೋಲ್ ಮಾಡಿಸ್ತಾಯಿದಾನೆ ? ಒಂದ್ಸಲ ಶ್ರೀನಾಥ್‌ಗೆ ಕೊಡ್ಬಾರ್ದೆ ? ಶ್ರೀನಾಥ್‌ಗೆ ಚಾನ್ಸ್ ಬರೋ ಹೊತ್ಗೆ – ಬ್ಯಾಟ್ಸ್‌ಮೆನ್ ಚೆನ್ನಾಗಿ ಕುದುರ್‍ಕೊಂಡಿರ್‍ತಾರೆ ! ಹಿಡ್ಕೊಂಡು ತದುಕ್ತಾರೆ ! ಹೂಂ ...... ಎಲ್ಲಾ ನಂ ಹಣೇಬರಹ ! ಕ್ರಿಕೆಟ್ ಟೀಂ ಕ್ಯಾಪ್ಟನ್ಸೀನೂ ಚೆನ್ನಾಗಿಲ್ಲ - ನಂ ಕಂಟ್ರಿ ಕ್ಯಾಪ್ಟನ್ಸೀನೂ ಚೆನ್ನಾಗಿಲ್ಲ !" ಅಂತ ತನಗೆ ತಾನೇ ಗೊಣ-ಗೊಣಾಂತ ವಟಗುಡ್ತಾಯಿದ್ರು, ಅಯೋಧ್ಯಾ ಗಲಾಟೆ ಬೇರೆ ನಡೀತಾ ಇತ್ತು, ಕಂಟ್ರೀಗೂ, ಕ್ರಿಕೆಟ್‌ಗೂ ಏನೋ ಕನ್‌ಫ್ಯೂಸ್ ಮಾಡ್ಕೊಂಡಿದ್ರು.

"ಹೋಗ್ಲಿ ಬಿಡಿ! ಮ್ಯಾಚುಗಳೆಲ್ಲಾ ಆದ್ಮೇಲೆ ಈ ಟಿ. ವಿ. ಕೋಮಾ ಬಿಟ್ಹೋಗತ್ತೆ! ಮೈಮೇಲೆ ಜ್ಞಾನ ಬರತ್ತೆ ಇವಂಗ!" ಅಂದ್ರು ಇವ್ರು.

"ಅಯ್ಯೋ! ನಿಮಗೆಲ್ಲೋ ಭ್ರಾಂತು! ಕ್ರಿಕೆಟ್ ಇಲ್ದಿದ್ರೆ ಏನು? ಧ್ರಾಭೆ ಪ್ರೋಗ್ರಾಂಗಳಿಗೇನು ಬರವೇ ಟಿ. ವೀಲಿ? ಸಾಲದ್ದಕ್ಕೆ ಸ್ಟಾರ್ ಟಿ, ವಿ. ಬೇರೆ ಹಾಕ್ಸಿದ್ದಾಯ್ತು! ಸಾಯಂಕಾಲ ಆದ್ರೆ ತಂದೆ, ಮಕ್ಕಳಿಗೆ ಗುದ್ದಾಗುದ್ದಿ! ಪಣಾಪಣಿ ಬಿ. ಬಿ. ಸಿ. ಇದೂಂತ ಇವ್ರು ... . ಎಂ. ಟಿ, ವಿ,ನೇ ಇಡ್ತೀವೀಂತ ಹುಡುಗ್ರು! ಆ ಎಂ. ಟೀವೀನೋ ... ... ನೋಡ್ತಾಯಿದ್ರೆ ಮೈ ಮುದುರ್ಕೊಂಡು, ಮುಖಾ ಮುಚ್ಚಿಕೊಳೋಣಾಂತ ಮುಜುಗರ ಆಗತ್ತೆ!"

"ಅಷ್ಟೊಂದು ಸಂಗೀತ ಕೇಳ್ತಾಯಿದ್ನಲ್ಲ ರೇಡಿಯೋಲಿ?" "ರೇಡಿಯೋ? ಓ ರೇಡಿಯೋ! ಅದರ ಹೆಸ್ರೇ ಮರ್ತು ಹೋಗಿದೆ! ಇಲ್ಲೇ ಎಲ್ಲೋ ಬೂಸ್ಟ್ ಹಿಡ್ಕೊಂಡು ಬಿದ್ದಿರ್ಬೇಕದು!

ಏಳು ಗಂಟೆಗೆ ಜೀ, ಟಿ. ವಿ. ಇಡ್ತಾರೆ, ಒಂಬತ್ತಕ್ಕೆ ದೂರದರ್ಶನದ ಹಿಂದಿ ಸೀರಿಯಲ್, ಹತ್ತು ಗಂಟೆಗೆ ಸ್ಟಾರ್ ಟಿ,ವಿಲಿ ರೆಮಿಂಗ್ಟನ್ ಸ್ಟೀಲ್! ಹನ್ನೊಂದಕ್ಕೆ ಲೇಟ್‌ನೈಟ್ ಮೂವಿ! ಮಲಗೋದು ಆ ದೇವ್ರಿಗೇ ಗೊತ್ತು! ಒಂದೊಂದ್ಸಲ ಕೇಬಲ್‌ನವ ಹಾಕೋ ತೆಲುಗು ಪಿಕ್ಚರ್ ನೋಡೋದೋ ಇಲ್ಲ ಜೀ ಟಿ.ವಿ. ಯ ಹಿಂದಿ ಸಿನಿಮಾ ಹಾಕೋದೋ ಅಂತ ಬೇರೆ ತಂದೆ ಮಕ್ಕಳಿಗೆ ಮುಷ್ಟಾ ಮುಷ್ಟಿ! ಅಂತೂ ಒಟ್ಟಾರೆ ಯಾವಾಗ್ಲೂ ಈ ದರಿದ್ರ ಟಿ.ವಿ. ಮುಂದೆ ಪ್ರತಿಷ್ಟೆ ಆಗಿರ್ತಾರೆ ... ಮೋಟು ಗೋಡೆ ಹತ್ರ ಹಮೇಶಾ ಕತ್ತೆ ನಿಂತಿರತ್ತಲ್ಲ ... ಹಾಗೆ!" ಅಬ್ಬಬ್ಬಬ್ಬ ಎಷ್ಟು ಮಾತಾಡ್ತೀಯೋ ಕಮ್ಮು! ಕಟ್ಕೊಂಡವನ್ನ ಕತ್ತೆ ಅಂತ ಬೇರೆ ಅಣಕಿಸ್ತೀಯಾ? ಪುಣ್ಯಕ್ಕೆ ಚರ್ಮದ ಬಾಯಿ! ಮರದ್ದಾಗಿದ್ರೆ ಯಾವತ್ತೋ ಚುಪ್ಪಾ ಚೂರಾಗ್ತಾ-ಯಿತ್ತು! ಹೋಗ್ಲಿ! ಟಿ. ವೀ. ಮುಂದೆ ಸುಮ್ನೆ ಕೂತ್ಕೊಳ್ಳೋದು ಹ್ಯಾಗೆ? ಪುಳ್ಳಂಗಾಯಿ ಉಂಡೆ ಇತ್ತಲ್ಲ - ಒಡ್ಕೊಂಡು ಬಾ! ಬಾಯಿಗೆ ಎಸೆದುಕೋತಾ ನೋಡ್ಬಹುದು!" ಅಂದ್ರು ಪತಿರಾಯ್ರು. ಕೋಕೋಕೇರ್ ಎಣ್ಣೆ ಜಾಹಿರಾತು ಬಂದಿತ್ತು ಟಿ, ವೀಲಿ. ಕೋಮಾದಿಂದ ಟೆಂಪರರಿ ಬಿಡುಗಡೆ ಬಂದಿತ್ತು.

"ಇವ್ರಿಗೆ ಟಿ,ವಿ, ನೋಡ್ತಾ ಆಗಾಗ ಬಾಯಿಗೆ ಎಸೆದು ಕೊಳ್ಳೋಕೇ ಡಬ್ಬಿಗಟ್ಲೆ ಕುರುಕಲು ತಿಂಡಿ ಮಾಡಿಟ್ಟಿರ್ರೀನಿ!" ಅಂದ್ಲು ಲಾಂಗ್ ಸಫ‌ರಿಂಗ್ ವೈಫು.

"ಎಲ್ಲಾರ ಹೊರಗೆ ಹೋಗಿ! ಈ ದುರಭ್ಯಾಸ ಬಿಟ್ಹೋಗ್ಬಹುದು ಇವಂಗೆ!" ಅಂದ್ರು ನಮ್ಮವರು.


"ಡಾಕ್ಟರೇ! ಯಾರ್ಮನೇಗೆ ಹೋಗೋದು? ಶನಿವಾರ ಹೋದ್ರೆ ಎಲ್ಲಾ ಹಿಂದೀ ಸಿನಿಮಾ ನೋಡ್ತಾಯಿರ್ತಾರೆ! ಭಾನುವಾರ .... ದೂರದರ್ಶನದೋರು ನಮ್ಮನ್ನೆಲ್ಲಾ ಗೋಳು ಹೊಯ್ಕೊಳ್ಳೋಕೆ ಅಂತಾನೇ ಎಷ್ಟು ಕೆಟ್ಟ, ಕಳಪೆ ಮುತ್ತಾತನ ಕಾಲದ ಕನ್ನಡ ಚಿತ್ರ ಹಾಕಿದ್ರೂ ಸರಿಯೇ... ಎಲ್ರೂ ಕೂತ್ಕೊಂಡು ಅದನ್ನೂ ನೋಡ್ತಾನೇ ಇರ್ತಾರೆ! ನಾವು ಹೋದ್ರೆ ಭಯಂಕರ ಡಿಸ್ಟರ್ಬೆನ್ಸ್ ತೋರ್‍ಸ್ತೆ ಆಗತ್ತೆ. ಈ 'ಪ್ರಾರಬ್ಧಗಳು ಈಗ್ಲೇ ವಕ್ಕರಿಸ್ಬೇಕೇ?' ಅಂತ ಹಿಡಿಶಾಪ ಮನಸ್ನಲ್ಲೇ ಹಾಕ್ಕೋತಾರೆ! ಯಾವಾಗ ಅಲ್ಲಿಂದ ತೊಲಗ್ತೀವಿ ಅಂತ ಕಾಯ್ತಾ ಇರ್ತಾರೆ! ನಮ್ಮ ಮಾತಿಗೆಲ್ಲಾ ಅರ್ಧಂಬರ್ಧ ಉತ್ತರ! ಒಂದು ಕಣ್ಣು-ಒಂದು ಕಿವಿ, ಟಿ.ವಿ. ಕಡೆ ಇರತ್ತಲ್ಲ! ಈ ದಿವ್ಯ ಉಪಚಾರ ಕಂಡು, ಸಧ್ಯ ನಾವೇ ಬೇಗ ಎದ್ದು ತೊಲಗಿ ಹೋಗೋಣ ಅನ್ಸತ್ತೇ! ಏನ್ಮಾಡೋದು? ಈ ನಡುವೆ ನಾನೂ ಇವರ್ಜತೆ ಕೂತ್ಕೊಂಡು ಟಿ.ವಿ. ನೋಡ್ತೀನಿ ಅಷ್ಟೆ! ಸಹವಾಸ ದೋಷ - ಏನ್ಮಾಡೋದು? ನಾಯಿ ವೇಷ ಹಾಕಿದ್ಮೇಲೆ ಬಗುಳಲೇ ಬೇಕು! ಈ ಹಾಳು ಟಿ.ವೀನ ನಮ್ಮ ಹಳೇ ಸಾಮಾನು ಕೊಳ್ಳೋ ಪ್ಯಾರೆಜಾನ್‌ಗೆ ಹಾಕ್ಬಿಡೋಣಾಂತ ಅನ್ನಿಬಿಡತ್ತೆ!" ಕಮಲ ಒಂದೇ ಕಣ್ಣಲ್ಲಿ ಅತ್ತಳು.

ಯಾವಾಗ ಎಂ.ಟಿ.ವಿ. ಹಾಕೋಣಾಂತ ಅಲ್ಲೇ ಹೊಂಚು ಹಾಕ್ತಾ ಇದ್ದ ಚೇತನ್ ಅವರ್ಮಗ, "ಓ ಹೋ! ಮಮ್ಮಿ! ನಾವು ಟಿ.ವಿ. ನೋಡೋದು ಏನ್ಮಹಾ! ನನ್ನ ಫ್ರೆಂಡು ಮೋಹನ್ ಮನೇಲಿ ಪ್ರತೀ ಭಾನುವಾರ ರೆಗ್ಯುಲರ್ ಟಿ.ವಿ. ಟೈಂ ಟೇಬಲ್ ಹಕೋತಾರೆ! ಒಂಬತ್ತು ಗಂಟೆ ಸೀರಿಯಲ್‌ಗೆ ಬ್ರೆಡ್-ಬಟರ್ ಜಾಮ್, ಕಾರ್ಟೂನ್‌ಗೆ ಬಿಸಿಬೇಳೆಬಾತ್, ಸಂಡಿಗೆ, ಜಂಗಲ್ ಬುಕ್‌ಗೆ ಮೊಸರನ್ನ, ಮಧ್ಯಾಹ್ನ ಮೂವಿಗೆ ಚಕ್ಕುಲಿ. ವರ್ಲ್ಡ್ ಆಫ್ ಸ್ಪೋರ್ಟ್ಸ್‌ಗೆ ಪೂರಿ, ಪಲ್ಯ, ಕನ್ನಡ ಸಿನಿಮಾಗೆ ಚಿತ್ರನ್ನ, ಕನ್ನಡ ವಾರ್ತೆಗೆ ಮೊಸರೊಡೆ. ಬಾಕಿ ಸಿನಿಮಾಗೆ....... ರಾಜಧಾನಿ ಎಕ್ಸ್‌ಪ್ರೆಸ್ ತರ ಓಡ್ತಾ ಇದ್ದ ಮಾತಿಗೆ ಒಂದ್ನಿಮಿಷ ಬ್ರೇಕ್ ಹಾಕಿದ ಭೂಪ.


"ಇನ್ನೇನು? ಬೆಳಿಗ್ಗೆಯಿಂದ ತಿಂದಿದ್ದೆಲ್ಲಾ ಅಷ್ಟು ಹೊತ್ತಿಗೆ ಹೊಟ್ಟೇಲಿ ಆಟೋರಿಕ್ಷಾ ಓಡಿಸ್ತಾ ಇರತ್ತೆ! ಸೋ ...... ಬಾಕಿ ಸಿನಿಮಾಗೆ ...... ಅಜೀರ್ಣಕ್ಕೆ

ಜೆಲೂಸಿಲ್ ಮಾತ್ರೆ, ಎಪ್ಸಂ ಸಾಲ್ಟ್, ಜೀರಿಗೆ, ಶುಂಠಿ ಕಷಾಯ .... ಹಾಗೆನಾದ್ರೂ ಬರೀ ಅಜೀರ್ಣಕ್ಕೇ ನಿಲ್ಲದೆ, ಬಾತ್‌ರೂಂ ಯಾತ್ರ ಮಾಡ್ಬೇಕಾದ ಸಂದರ್ಭ ಬಂದ್ರೆ... ಇದ್ವೇ ಇವೆ ಡಯೋರಿಯಾ ಮಾತ್ರೆಗಳು... ಡಾಕ್ಟರು ಹೀಯಾಳಿಸಿದ್ರು.


ಎಣ್ಣ ಜಾಹೀರಾತು ಮುಗಿದಿದ್ರಿಂದ. ಶೀನಿ ಮತ್ತೆ ಟಿ,ವೀಲಿ ಮೈಮರೆತಿದ್ರು. ಸದಾಶಿವನಿಗೆ ಅದೇ ಧ್ಯಾನ! ಏನೇ ಇರ್ಲಿ ..ಒಟ್ಟಿನಲ್ಲಿ ಟಿ.ವಿ. ರಾಕ್ಷಸನ ಕಪಿಮುಷ್ಟೀಲಿ ಸಿಕ್ಕಿಹಾಕ್ಕೊಂಡು ನಾವೆಲ್ಲ ಒದ್ದಾಡ್ತಾಯಿರೋದು ನಿಜ! ಕಟ್ಕೋಳೋ ಹಾಗಿಲ್ಲ .... ಬಿಡೋ ಹಾಗಿಲ್ಲ! ಒಂಥರಾ ಕೆಟ್ಟ ನಿರ್ಭಂಧ! ಇದು ಟಿ,ವಿ, ಯುಗ! ಈ ಯುಗದಲ್ಲಿದ್ಕೊಂಡು ಟಿ. ವಿ. ನೋಡೋಲ್ಲಾಂದ್ರೆ ಹ್ಯಾಗೆ? ದೆವ್ವಾನ ಮದುವೆ ಮಾಡ್ಕೊಂಡ್ಮೇಲೆ ಹುಣಸೆಮರ ಹತ್ಲೇ ಬೇಕು! ಅಲ್ವೆ?!



"ನಾನು ಎತ್ತಿ ಕೊಂಡಾಗ್ಲೆಲ್ಲಾ ನಿಮ್ಮ ಮಗು ನಗತ್ತೆ ಸುಶೀಲಾ"
"ನಾನೇನ್ಮಾಡ್ಲಿ ಪಂಕಜ, ಈಗಿನ ಕಾಲದ ಮಕ್ಕಳಿಗೆ ಮರ್ಯಾದೇನೇ ಇಲ್ಲ."



Champs of the printing track – HMT's range of super performers.



SOM 131


Single Colour Sheetfed Offset Printing Machine


Max sheet size	mm	560 x 790
Min sheet size	mm	300 x 420
Speed range	i p h	2500 7500
Power	kW	7 52

SOM 125

Single Colour Sheetfed Offset Printing Machine

Max. sheet size	mm	460 x 460
Min sheet size	mm	210 x 250
Speed range	i p h	2500-7500
Power	kW	3 45





INVICTA 36R


Single Colour Sheetfed Offset Printing Machine

Max sheet size	mm	655 x 925
Min sheet size	mm	300 x 420
Speed range	i p h	2500-7500
Power	kW	7 52

SOM 236

Two Colour Sheetfed Offset Printing Machine

Max sheet size	mm	655 x 925
Min sheet size	mm	300 x 420
Speed range	i p h	2500 7500
Power	kW	14 22



For details contact: hmt

HMT Limited
Machine Tool Marketing Division
10/A, Kasturba Road
Bangalore-560 001.

REGISTERED No. BGW - 180

Printed by V R NATH for the Publisher M SHIVAKUMAR, Published and owned by M SHIVA KUMAR, 36, 6th Main Road, Malleswaram, Bangalore - 560 003 Printed at IMPRESSIONS, 404, Sampige Road, Malleswaram, Bangalore - 560 003 Editor M SHIVA KUMAR